ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಫೆಬ್ರವರಿ 12, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 271 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999




## ದಾವಣಗೆರೆ ಅರ್ಬನ್ ಬ್ಯಾಂಕ್ ಚುನಾವಣೆ

**ಶೇ. 43.13 ರಷ್ಟು ಶಾಂತಿಯುತ ಮತದಾನ**

ದಾವಣಗೆರೆ, ಫೆ. 11- ಬಹುಜನರ ಬೇಡಿಕೆಯ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಗರದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಗೆ ಇಂದು ನಡೆದ ಚುನಾವಣೆಯಲ್ಲಿ ಶೇ. 43.13 ರಷ್ಟು ಶಾಂತಿಯುತ ಮತದಾನವಾಗಿದೆ.

12,203 ಮತದಾರರ ಪೈಕಿ 5263 ಜನರು ಮತದಾನ ಮಾಡಿದ್ದಾರೆ. ಮೋತಿ ವೀರಪ್ಪ ಕಾಲೇಜಿನ ಆವರಣದಲ್ಲಿ ಏರ್ಪಾಡಾಗಿದ್ದ ಈ ಚುನಾವಣೆಯ ಮತದಾನ ಪ್ರಕ್ರಿಯೆಯು ಇಂದು ಬೆಳಿಗ್ಗೆಯಿಂದ ಸಂಜೆವರೆಗೆ ಬಿರುಸಿನಿಂದ ನಡೆಯಿತು.

ಬ್ಯಾಂಕ್ ಆಡಳಿತ ಮಂಡಳಿಯ 15 ಸ್ಥಾನಗಳಲ್ಲಿ ಈಗಾಗಲೇ ಐವರು ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 10 ಸ್ಥಾನಗಳಿಗೆ ಆಯ್ಕೆ ಬಯಸಿ ಸ್ಪರ್ಧಿಸಿದ್ದ 18 ಜನರು ತಮ್ಮದೇ ಆದ ವರ್ಚಸ್ಸಿನಿಂದ ಮತದಾರರ ಗಮನ ಸೆಳೆಯುತ್ತಿದ್ದರು.

ಬ್ಯಾಂಕಿನ ಹಾಲಿ 9 ಜನರು ಮತ್ತೊಂದು ಅವಧಿಗೆ ಪುನರಾಯ್ಕೆ ಬಯಸಿ ಸ್ಪರ್ಧಿಸಿದ್ದರು. ಉಳಿದ 9 ಜನರು ಇದೇ ಮೊದಲ ಬಾರಿಗೆ ಆಯ್ಕೆ ಬಯಸಿ ಚುನಾವಣಾ ಕಣದಲ್ಲಿದ್ದರು. ಈ ಎಲ್ಲಾ 18 ಜನರು ಮಾತ್ರವಲ್ಲದೇ, ಅವಿರೋಧವಾಗಿ ಆಯ್ಕೆಯಾಗಿರುವ ಐವರು ಮತ್ತು ಅಭ್ಯರ್ಥಿಗಳ ಕುಟುಂಬ ವರ್ಗದವರು, ಬಂಧುಗಳು, ಹಿತೈಷಿಗಳು ಮತದಾರರನ್ನು ತಮ್ಮದೇ ಆದ ಧಾಟಿಯಲ್ಲಿ ನಮಸ್ಕರಿಸುವುದರ ಮೂಲಕ ಸ್ವಾಗತಿಸಿ ತಮಗೆ ಮತದಾನ ಮಾಡುವಂತೆ ಕೇಳುತ್ತಿದ್ದ (2ನೇ ಪುಟಕ್ಕೆ)

## ಸುತ್ತೂರು ಮಠ ನಿಸ್ವಾರ್ಥ ಸೇವಾ ಕೇಂದ್ರ

### ಸುತ್ತೂರು: ಪಾರ್ವತಮ್ಮ- ಶಾಮನೂರು ಶಿವಶಂಕರಪ್ಪ ಅತಿಥಿ ಗೃಹ ಉದ್ಘಾಟಿಸಿದ ಷಾ

ಮೈಸೂರು, ಮಾ. 11 - ಸಮೀಪದ ಸುತ್ತೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಕುಟುಂಬದವರು ನಿರ್ಮಿಸಿರುವ ಪಾರ್ವತಮ್ಮ- ಶಾಮನೂರು ಶಿವಶಂಕರಪ್ಪ ಅತಿಥಿ ಗೃಹವನ್ನು ಕೇಂದ್ರ ಗೃಹ ಸಚಿವ ಅಮಿತ್ ಷಾ ಉದ್ಘಾಟಿಸಿದರು.

ಸುತ್ತೂರು ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಉದ್ಘಾಟನೆ ನಂತರ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅಮಿತ್ ಷಾ, ಸುತ್ತೂರು ಮಠವು ನಿಸ್ವಾರ್ಥ ಸೇವೆ ಹಾಗೂ ಪರೋಪಕಾರದ ಕೇಂದ್ರವಾಗಿದೆ ಎಂದು ಬಣ್ಣಿಸಿದರು.

ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಹಿಂದಿನ ಎಲ್ಲ ಮಠಾಧೀಶರಂತೆ ನಿರಂತರವಾಗಿ ಸೇವಾ ಪರಂಪರೆ ಹಾಗೂ ಸೇವಾ ಯಜ್ಞವನ್ನು ಚಾಲನೆಯಲ್ಲಿರಿಸಿದ್ದಾರೆ ಎಂದರು.

ಸುತ್ತೂರು ಮಠವು ಲಕ್ಷಾಂತರ ಜನರು ಹಾಗೂ ಮಕ್ಕಳ ಜೀವನದಲ್ಲಿ ಬೆಳಕು ಚೆಲ್ಲಿದೆ. ಅದರಲ್ಲೂ ದಿವ್ಯಾಂಗರಿಗಾಗಿ ಪಾಲಿಟೆಕ್ನಿಕ್ ತೆರೆದಿರುವುದು ಇಡೀ ದೇಶಕ್ಕೆ ಅತ್ಯಂತ ಆದರ್ಶವಾಗಿದೆ ಎಂದು ಅಮಿತ್ ಷಾ ಹೇಳಿದರು.



ಸುತ್ತೂರಿಗೆ ಯಾವ ಕಾರ್ಯಕ್ರಮಕ್ಕೆ ತೆರಳುತ್ತಿದ್ದೀರಿ ಎಂದು ಪತ್ರಕರ್ತರು ಕೇಳಿದ್ದರು. ಆಗ ನಾನು ದೊಡ್ಡ ಭವನದ ಲೋಕಾರ್ಪಣೆಗಾಗಿ ಬರುತ್ತಿದ್ದೇನೆ ಎಂದು ಭಾವಿಸಿಲ್ಲ, ಶ್ರೀಗಳ ಆಶೀರ್ವಾದ ಪ್ರಾಪ್ತಿಗೆ ಬರುತ್ತಿದ್ದೇನೆ ಎಂದು ಉತ್ತರಿಸಿದ್ದೆ ಎಂದೂ ಅಮಿತ್ ಷಾ ಹೇಳಿದರು.

ಸುತ್ತೂರು ಮಠವು ಅಯೋಧ್ಯೆಯಲ್ಲಿ ತನ್ನ ಶಾಖೆ ತೆರೆಯುವ ನಿರ್ಧಾರ ತೆಗೆದುಕೊಂಡಿರುವುದಕ್ಕಾಗಿ ಅಭಿನಂದಿಸುತ್ತೇನೆ. ಸುತ್ತೂರು ಮಠದ ಸೇವೆಯನ್ನು ನಾವು ಸದಾ ಭಕ್ತಿಯಿಂದ ಸ್ಮರಿಸುತ್ತೇವೆ ಎಂದೂ ಅವರು ಹೇಳಿದರು.

ಕರ್ನಾಟಕದ ಈ ಪವಿತ್ರ ಮಣ್ಣಿನಲ್ಲಿ ಜನಿಸಿದ ಬಸವೇಶ್ವರರು, ವಿಶ್ವದ ಕೋಟ್ಯಂತರ ಜನರಿಗೆ ಪ್ರೇರಣೆ ಹಾಗೂ ಭಕ್ತಿ ತುಂಬಿದ್ದಾರೆ. ಅವರ ವಚನಗಳಿಂದ ಕೋಟ್ಯಂತರ ಜನರಿಗೆ ಮೋಕ್ಷದ ದಾರಿ ದೊರೆತಿದೆ. ಸತ್ಯ ಮಾರ್ಗಕ್ಕೆ ಪ್ರೇರಣೆಯಾಗಿದೆ ಹಾಗೂ ಅನೇಕರಿಗೆ ಶಾಂತಿ ದೊರೆತಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸುತ್ತೂರು ಮಠದ ಬಗ್ಗೆ ಭಕ್ತಿ ಹೆಚ್ಚಿದೆ. ಹಾಗೆಯೇ ಅಮಿತ್ ಷಾ ಅವರು ಗೃಹ ಮಂತ್ರಿಯಾಗಿ ಮಾತ್ರವಲ್ಲ, ಮಠದ ಸದ್ಭಕ್ತರಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ (2ನೇ ಪುಟಕ್ಕೆ)

## ಮುಂಗಾರು ಮಳೆ ಚೇತರಿಕೆ ನಿರೀಕ್ಷೆ



**ಈ ವರ್ಷ ಇರದು ಎಲ್ ನೀನೋ**

ನವದೆಹಲಿ, ಫೆ. 11 - ಕಳೆದ 2023ರಲ್ಲಿ ಬಿಸಿ ಏರಿಕೆಗೆ ಕಾರಣವಾಗಿದ್ದ ಎಲ್ ನೀನೋ, ಈ ವರ್ಷ ಜೂನ್ ತಿಂಗಳಲ್ಲಿ ತಗ್ಗಲಿದೆ. ಇದರಿಂದಾಗಿ ಮುಂಗಾರು ಚೇತರಿಕೆ ಕಾಣಲಿದೆ ಎಂದು ಹವಾಮಾನ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಪೆಸಿಫಿಕ್ ಸಮುದ್ರದಲ್ಲಿ ತಾಪಮಾನ ಹೆಚ್ಚಳಕ್ಕೆ ಕಾರಣವಾಗುವ ಎಲ್ ನಿನೋ, ವಿಶ್ವದಾದ್ಯಂತ ಹವಾಮಾನದ ಮೇಲೆ ಪರಿಣಾಮ ಬೀರುತ್ತದೆ. ಅದೀಗ ದುರ್ಬಲವಾಗುತ್ತಿದೆ. ಆಗಸ್ಟ್ ವೇಳೆಗೆ ಲಾ ನೀನಾ ಪರಿಸ್ಥಿತಿ ಬರಲಿದೆ ಎಂದು ಎರಡು ಜಾಗತಿಕ ಪರಿಸರ ಸಂಸ್ಥೆಗಳು ಕಳೆದ ವಾರ ಘೋಷಿಸಿವೆ.

ಜೂನ್ - ಆಗಸ್ಟ್ ವೇಳೆಗೆ ಲಾ ನೀನಾ ಬರಲಿದೆ. ಹೀಗಾಗಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮಳೆ ಉತ್ತಮವಾಗಿರುವ ನಿರೀಕ್ಷೆ ಇದೆ ಎಂದು ಭಾರತದ ಹವಾಮಾನ ವಿಜ್ಞಾನಿಗಳು ಹೇಳಿದ್ದಾರೆ.

ಆದರೆ, ಹವಾಮಾನ ಮುನ್ಸೂಚನೆಯು ಹಲವಾರು ಅಂಶಗಳನ್ನು ಆಧರಿಸಿರುತ್ತದೆ. ಹೀಗಾಗಿ ನಿಖರವಾಗಿ ಹೇಳುವುದು ಸಾಧ್ಯವಾಗದು ಎಂದೂ ಅವರು ಹೇಳಿದ್ದಾರೆ.

ಜೂನ್ - ಜುಲೈ ತಿಂಗಳಲ್ಲಿ ಲಾ ನೀನಾ ಪರಿಸ್ಥಿತಿ ಬರಲಿದೆ ಎಂದು ಭೂ ವಿಜ್ಞಾನ ಸಚಿವಾಲಯದ ಮಾಜಿ ಕಾರ್ಯದರ್ಶಿ ಮಾಧವನ್ ರಾಜೀವನ್ ಹೇಳಿದ್ದಾರೆ. ಎಲ್ - ನೀನೋ ಪರಿಸ್ಥಿತಿಯು ಎನ್ಸೊ - ತಟಸ್ಥ ಪರಿಸ್ಥಿತಿಗೆ ಪರಿವರ್ತನೆ ಯಾದರೂ ಸಹ, ಕಳೆದ ವರ್ಷಕ್ಕಿಂತ ಈ ಬಾರಿ ಮಳೆ ಪ್ರಮಾಣ ಉತ್ತಮವಾಗಿರಲಿದೆ ಎಂದವರು ಹೇಳಿದ್ದಾರೆ.

ಈ ವರ್ಷ ಏಪ್ರಿಲ್ - ಜೂನ್ ತಿಂಗಳಲ್ಲಿ ಎಲ್ - ನೀನೋ ಪರಿಸ್ಥಿತಿ ಅಂತ್ಯವಾಗಲಿದೆ. ನಂತರ ಎನ್ಸೊ - ತಟಸ್ಥ ಪರಿಸ್ಥಿತಿ ಬರುವ ಸಾಧ್ಯತೆ ಶೇ.79ರಷ್ಟಿದೆ. ಜೂನ್ - ಆಗಸ್ಟ್ ವೇಳೆಗೆ ಲಾ ನೀನಾ ಬರುವ ಸಾಧ್ಯತೆ ಶೇ.55ರಷ್ಟಿದೆ ಎಂದು ಅಮೆರಿಕದ ಎನ್.ಒ.ಎ.ಎ. ಸಂಸ್ಥೆ ತಿಳಿಸಿದೆ. ಎಲ್ ನೀನೋ ದುರ್ಬಲವಾಗಲು ಆರಂಭಿಸಿದೆ. ಇದಾದ ನಂತರ ಲಾ ನೀನಾ ಬರಲಿದೆ ಎಂದು ಯುರೋಪಿನ ಹವಾಮಾನ ಸಂಸ್ಥೆಯಾದ ಸಿ3ಎಸ್ ತಿಳಿಸಿದೆ.

ಪ್ರಸಕ್ತ ನಾವು ನಿಶ್ಚಿತವಾಗಿ ಏನೂ ಹೇಳಲು ಸಾಧ್ಯವಿಲ್ಲ. ಕೆಲ ಮಾದರಿಗಳು ಲಾ (2ನೇ ಪುಟಕ್ಕೆ)


## ದಿ ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

### ಹೃದಯಪೂರ್ವಕ ಕೃತಜ್ಞತೆಗಳು

ಮಾನ್ಯ ಮತದಾರ ಬಾಂಧವರೇ,

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 11.2.2024ರಂದು ನಡೆದಿದ್ದು, ಈ ಚುನಾವಣೆಯಲ್ಲಿ ಶ್ರೀ ಬಿ.ಸಿ. ಉಮಾಪತಿ ಮತ್ತು ಶ್ರೀ ಕೋಗುಂಡಿ ಬಕ್ಕೇಶಪ್ಪ ಅವರುಗಳ ಗುಂಪಿನಿಂದ ಸ್ಪರ್ಧಿಸಿದ್ದ ನಮಗೆ ಮತದಾನ ಮಾಡಿದ ಬ್ಯಾಂಕಿನ ಎಲ್ಲಾ ಮತದಾರ ಬಾಂಧವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಚುನಾವಣೆ ಸಂದರ್ಭದಲ್ಲಿ ನಮ್ಮೊಂದಿಗೆ ಹಗಲಿರುಳು ಶ್ರಮಿಸಿದ ನಮ್ಮ ಆತ್ಮೀಯರಿಗೂ, ಹಿತೈಷಿಗಳಿಗೂ, ಗುರು-ಹಿರಿಯರಿಗೂ, ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಚುನಾವಣಾಧಿಕಾರಿಗಳಿಗೂ, ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ, ಪೊಲೀಸರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ಉಮಾಪತಿ ಬಿ.ಸಿ. | ಕೋಗುಂಡಿ ಬಕ್ಕೇಶಪ್ಪ | ಅಂದನೂರು ಮುಪ್ಪಣ್ಣ | ಅಜ್ಜಂಪುರಶೆಟ್ರು ವಿಜಯಕುಮಾರ್
ಜಯರುದ್ರೇಶ್ ಟಿ. ಎಸ್. | ದೇವರಮನಿ ಶಿವಕುಮಾರ್ | ಪಲ್ಲಾಗಟ್ಟೆ ಶಿವಾನಂದಪ್ಪ | ಎಂ. ಚಂದ್ರಶೇಖರ್
ಕಂಚಿಕೇರಿ ಮಹೇಶ್ | ಇ.ಎಂ. ಮಂಜುನಾಥ | ವಿ. ವಿಕ್ರಮ್ | ಶ್ರೀಮತಿ ಸುರೇಖಾ ಎಂ. ಚಿಗಟೇರಿ
ಶ್ರೀಮತಿ ಅರ್ಚನಾ ಡಾ. ರುದ್ರಮುನಿ | ರುದ್ರಮುನಿಸ್ವಾಮಿ ಹೆಚ್.ಎಂ. | ಸೋಗಿ ಮುರುಗೇಶ್


## ಪಾಕ್ : ಫಲಿತಾಂಶ ಪ್ರಶ್ನಿಸಿ ಕೋರ್ಟ್‌ನಲ್ಲಿ ಅರ್ಜಿಗಳ ಸರಮಾಲೆ

ಇಸ್ಲಾಮಾಬಾದ್, ಫೆ. 11 - ಪಾಕಿಸ್ತಾನದ ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳನ್ನು ಪ್ರಶ್ನಿಸಿ ಅಲ್ಲಿನ ನ್ಯಾಯಾಲಯಗಳಲ್ಲಿ ಅರ್ಜಿಗಳ ಸರಮಾಲೆಯೇ ದಾಖಲಾಗುತ್ತಿದೆ. ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಅವರ ನೇತೃತ್ವದ ಪಿ.ಟಿ.ಐ. ಪಕ್ಷ ಬೆಂಬಲಿತ ಅಭ್ಯರ್ಥಿಗಳೇ ಅತಿಹೆಚ್ಚು ಅರ್ಜಿಗಳನ್ನು ದಾಖಲಿಸಿದ್ದಾರೆ.

ಲಾಹೋರ್ ಹೈಕೋರ್ಟ್‌ನಲ್ಲಿ ಹೆಚ್ಚಿನ ಅರ್ಜಿಗಳನ್ನು ದಾಖಲಿಸಲಾಗಿದೆ. ಪಿ.ಟಿ.ಐ. ಬೆಂಬಲಿತ ಅಭ್ಯರ್ಥಿಗಳು (2ನೇ ಪುಟಕ್ಕೆ)

## ಪೇಟಿಎಂ ವಿದೇಶಿ ಹೂಡಿಕೆ : ಕೇಂದ್ರ ಸರ್ಕಾರದ ಪರಿಶೀಲನೆ

ನವದೆಹಲಿ, ಫೆ. 11 - ಪೇಟಿಎಂ ಪೇಮೆಂಟ್ ಸರ್ವೀಸಸ್ (ಪಿ.ಪಿ.ಎಸ್.ಎಲ್.) ಮೂಲಕ ಚೀನಾದಿಂದ ಬಂದಿರುವ ವಿದೇಶಿ ನೇರ ಹೂಡಿಕೆಯ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ನವೆಂಬರ್ 2020ರಂದು ಪಿ.ಪಿ.ಎಸ್.ಎಲ್. ನಗದು ಪಾವತಿ ಕಾರ್ಯನಿರ್ವಹಣೆಗಾಗಿ ಆರ್.ಬಿ.ಐ.ಗೆ ಅರ್ಜಿ ದಾಖಲಿಸಿತ್ತು.

ನವೆಂಬರ್ 2022ರಲ್ಲಿ ಅರ್ಜಿ ತಳ್ಳಿ ಹಾಕಿದ್ದ ಆರ್. (2ನೇ ಪುಟಕ್ಕೆ)


## ಹರಿಹರ ನಗರದ ಖ್ಯಾತ ಉದ್ಯಮಿ ಬೊಂಗಾಳೆ ಜಗನ್ನಾಥರಾವ್ ನಿಧನ



ಹರಿಹರ ನಗರ ವಿದ್ಯಾನಗರದ ಅರವತ್ತು ಅಡಿ ರಸ್ತೆಯ ನಿವಾಸಿಯಾದ
ಖ್ಯಾತ ಬೊಂಗಾಳೆ ಸ್ಟೀಲ್ ಅಂಡ್ ಟ್ರೇಡರ್ಸ್‌ನ ಮಾಲೀಕರು
ದಾವಣಗೆರೆ ಪೂಜಾ ಇಂಟರ್ ನ್ಯಾಶನಲ್ ಹೋಟೆಲ್ ಪಾಲುದಾರರು
ನಾಮದೇವ ಶಿಂಪಿ ಸಮಾಜದ ಮುಖಂಡರಾದ
ದಿವಂಗತ ಬೊಂಗಾಳೆ ಶೇಶಪ್ಪನವರ ಮಗ ಹಾಗೂ
ದಿವಂಗತ ಬೊಂಗಾಳೆ ಗಣಪತಿ ರಾವ್‌ರವರ ಸಹೋದರ

### ಶ್ರೀ ಬೊಂಗಾಳೆ ಜಗನ್ನಾಥ ರಾವ್

(ಎಂ.ಎಸ್ಸಿ ಬಿಎಡ್)

ಇವರು ದಿನಾಂಕ 11.02.2024 ರ ಭಾನುವಾರ ರಾತ್ರಿ 11.45 ಕ್ಕೆ ಸ್ವಗೃಹದಲ್ಲಿ ನಿಧನರಾದರೆಮದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.02.2024ರ ಸೋಮವಾರ ಸಂಜೆ 4 ಗಂಟೆಗೆ ಹರಿಹರ ನಗರದ ದಾಲ್ಮಿಯಾ ವಿಶ್ರಮ್ ಘಾಟ್‌ನಲ್ಲಿ ನೇರವೇರಿಸಲಾಗುವುದು.

ದುಃಖತಪ್ತರು : ಏಕನಾಥ ಬೊಂಗಾಳೆ, ಜ್ಞಾನೇಶ್ವರ ಬೊಂಗಾಳೆ
ಸಹೋದರಿಯರು ಮತ್ತು ಸಹೋದರರು ಮೋಹನ್ ರಾವ್
ಬೊಂಗಾಳೆ ಕಾಳಪ್ಪ ಹಾಗೂ ಬೊಂಗಾಳೆ ವಂಶಸ್ಥರು, ಹರಿಹರ. ಮೊ 98452 61405



## ಸವಿನೆನಪು



### ದಿ|| ಐ.ಪಿ. ವಿಶ್ವಾರಾಧ್ಯ

ನಿಧನ : 12.02.2004

ನೀವು ನಮ್ಮನ್ನಗಲಿ ಇಂದಿಗೆ 20 ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿ ಹಾಗೂ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಪತ್ನಿ, ಮಕ್ಕಳು, ಮೊಮ್ಮಕ್ಕಳು
ಹಾಗೂ ಕುಟುಂಬ ವರ್ಗ



## ಸ್ವದೇಶಾಗಮನ – ಸುಸ್ವಾಗತ



ಶ್ರೀಮತಿ ಸುನಂದಮ್ಮ ರಾಜಶೇಖರ್ ಮಾವಿನಕೆರೆ
ಬೆಂಗಳೂರಿನ- ನಿವಾಸಿಗಳಾದ
ಕೀರ್ತಿ ಲತಾ ಹೊನ್ನಗಂಗಪ್ಪ,
ಇವರುಗಳು ಆಸ್ಟ್ರೇಲಿಯಾ ಪ್ರವಾಸ ಮುಗಿಸಿ
ದಿನಾಂಕ 12.02.2024 ರ ಸೋಮವಾರ
ಸಂಜೆ 4:30ಕ್ಕೆ ಬೆಂಗಳೂರಿಗೆ
ಅಗಮಿಸುತ್ತಿರುವ ಇವರಿಗೆ
ಹಾರ್ದಿಕ ಸುಸ್ವಾಗತ.

ಇವರಿಗೆ ಆಹ್ವಾನಿಸಿ ಆತಿಥ್ಯ ನೀಡಿದ ಕೀರ್ತಿ ಲತಾ ಹೊನ್ನಗಂಗಪ್ಪ ಇವರ ಪುತ್ರಿ ರಶ್ಮಿ ಚಿದಾನಂದ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

- ಎಂ.ಆರ್. ಮಧುಕರ್ - ನೇತ್ರಾ ಮಧುಕರ್ - ನಿತಿನ್.ಎಂ
- ನವೀನ್ .ಎಂ - ನಿಖಿತಾ .ಎಂ - ಎಂ.ಆರ್ ಸುಧಾಕರ್
- ಗಂಗಾ ಸುಧಾಕರ್, - ವರ್ಷ .ಎಂ. - ಅಂಕಿತ.ಎಂ
- ಸುಭಾಷ್.ಎಸ್ ಸಂಪಗಾವಿ, ಅಸಿಸ್ಟೆಂಟ್ ಕಮೀಷನರ್, ಚಿಕ್ಕೋಡಿ
- ವೀಣಾ ಸಂಪಗಾವಿ, - ಗೌರಿ - ಉದಯಕುಮಾರ್ ಮೊರಬದ
- ಸುಮಯಿರ - ಮಧುರ - ಮಲ್ಲಿಕಾರ್ಜುನ್ ಹಾಗೂ

ಬಂಧು-ಮಿತ್ರರು, ಮಧು ಟ್ರಾನ್ಸ್‌ಪೋರ್ಟ್ ಸಿಬ್ಬಂದಿ ವರ್ಗದವರು.
ಮೊ : 98441 38240




ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಇದೇ ದಿನಾಂಕ 14 ಮತ್ತು 15 ರಂದು ಜರುಗಲಿರುವ ಸಂತ ಸೇವಾಲಾಲ್ ಮಹಾರಾಜರ ಜಯಂತೋತ್ಸವಕ್ಕೆ ಹರಪನಹಳ್ಳಿ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಭಕ್ತರು ತಂಡ ತಂಡವಾಗಿ ಸುಡು ಬಿಸಿಲನ್ನು ಲೆಕ್ಕಿಸದೇ ಬರಿಗಾಲಿನಿಂದ ಪಾದಯಾತ್ರೆ ಮೂಲಕ ಭಾನುವಾರ ಮಲೇಬೆನ್ನೂರು ಬಳಿ ಸಾಗಿದರು. ಪಾದಯಾತ್ರಿಗಳಿಗೆ ಕೊಮಾರನಹಳ್ಳಿ ದೇವಸ್ಥಾನದಲ್ಲಿ ಊಟ ಹಾಗೂ ವಸತಿಗೆ ವ್ಯವಸ್ಥೆ ಮಾಡಲಾಗಿದೆ.

# ಭಾಷೆಗೆ ಅವಮಾನವಾದರೆ ಅದನ್ನ ಸಹಿಸೆಲಾರೆವು

## ರಾಣೇಬೆನ್ನೂರಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಉಪಸಭಾಪತಿ ರುದ್ರಪ್ಪ ಲಮಾಣಿ

ರಾಣೇಬೆನ್ನೂರು, ಫೆ.11- ಪರ ಭಾಷೆಯನ್ನು ಗೌರವಿಸುವ ನಾವು ನಮ್ಮ ಭಾಷೆಗೆ ಅವಮಾನವಾದರೆ ಅದನ್ನು ಸಹಿಸಲಾರೆವು. ಅಂತಹ ಸಂದರ್ಭದಲ್ಲಿ ಸಂಘಟಿತರಾಗಿ ಅವರ ವಿರುದ್ಧ ಹೋರಾಡುತ್ತೇವೆ ಎಂದು ವಿಧಾನಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ ಹೇಳಿದರು.



ರಾಣೇಬೆನ್ನೂರಿನಲ್ಲಿ ಇಂದು ಎರಡು ದಿನಗಳ ಜಿಲ್ಲಾ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾರಾಷ್ಟ್ರಿಗರ ಉಪಟಳದಿಂದ ಬೆಳಗಾವಿ ಭಾಗದ ಜನರಿಗೆ ಆಗುತ್ತಿರುವ ತೊಂದರೆಯನ್ನುಗಮನದಲ್ಲಿಟ್ಟುಕೊಂಡು ಸರ್ಕಾರ ಅಲ್ಲಿ ಮಿನಿ ವಿಧಾನಸೌಧವನ್ನು ನಿರ್ಮಿಸಿದ್ದು, ಪ್ರತಿವರ್ಷ ಅಲ್ಲಿ ಅಧಿವೇಶನ ನಡೆಸಲಾಗುತ್ತಿದೆ. ಭಾಷೆಗೆ ತೊಂದರೆ ಬಂದರೆ, ಸರ್ಕಾರ ಸಹ ಸಹಿಸಲಾರದು ಎಂದು ಹೇಳಿದ ರುದ್ರಪ್ಪ ಲಮಾಣಿ, ಮುಂದಿನ ಜಿಲ್ಲಾ ಸಮ್ಮೇಳನದ ಸ್ಥಳವನ್ನು ಈ ಸಮ್ಮೇಳನದಲ್ಲಿಯೇ ನಿರ್ಧರಿಸುವಂತೆ ಸೂಚಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಪ್ರಕಾಶ ಕೋಳಿವಾಡ ಮಾತನಾಡಿ, ಸಮ್ಮೇಳನಗಳು ಕೇವಲ ಪುಸ್ತಕ ಬಿಡುಗಡೆಯ ಸಮಾರಂಭಗಳಾಗದೇ ಆಯಾ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಜನಪ್ರತಿನಿಧಿಗಳ ಮೇಲೆ ತರುವ ಒತ್ತಡಗಳಾಗಬೇಕು ಎಂದರು. ರಾಣೇಬೆನ್ನೂರು ತಾಲ್ಲೂಕನ್ನು ಪ್ರವಾಸಿ ತಾಣ ಮಾಡುವ ಹಾಗೂ ಅನಕ್ಷರ ರಹಿತ ತಾಲ್ಲೂಕು ಮಾಡುವ ಮತ್ತೆರಡು ತಮ್ಮ ಕನಸುಗಳನ್ನು ಪ್ರಕಾಶ್ ಅವರು ಬಿತ್ತರಿಸಿದರು.

ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಮಹೇಶ್ ಜೋಷಿ ಮಾತನಾಡಿ, ಶಿಶುನಾಳ ಷರೀಫರು, ಅಂಬಿಗರ ಚೌಡಯ್ಯ, ಸರ್ವಜ್ಞ, ಹೆಳವನಕಟ್ಟೆ ಗಿರಿಯಮ್ಮ, ಗುರುಗೋವಿಂದ ಭಟ್ಟರು, ಕನಕದಾಸರು ಮಹಾ ಮಹಿಮರಿಂದ ರಾಣೇಬೆನ್ನೂರು, ಹಾವೇರಿ ಜಿಲ್ಲೆ ಪುಣ್ಯಭೂಮಿಯಾಗಿದೆ. ಇಂತಹ ಪ್ರಾಥ ಸ್ಮರಣೀಯರನ್ನು ನೆನೆಯುವುದು ಪರಿಷತ್ ಕಾರ್ಯವಾಗಿದೆ ಎಂದು ಹೇಳಿದರು.

ತಾಲ್ಲೂಕು ಅಧ್ಯಕ್ಷ ವಿರೇಶ್ ಜಂಬಗಿ ಸ್ವಾಗತಿಸಿದರು. ಜಿಲ್ಲಾಧ್ಯಕ್ಷ ಲಿಂಗಯ್ಯ ಹಿರೇಮಠ ಪ್ರಾಸ್ತಾವಿಕ ಮಾತಗಳನ್ನಾಡಿದರು. ವೇದಿಕೆಯಲ್ಲಿ ಮಾಜಿ ಶಾಸಕ ಅರುಣಕುಮಾರ್ ಪೂಜಾರ್, ಏಕನಾಥ ಭಾನುವಳ್ಳಿ, ಜಿ.ಜಿ.ಹೊಟ್ಟಿಗೌಡ್ರ, ಪುಟ್ಟಪ್ಪ ಮರಿಯಮ್ಮನವರ್, ಪ್ರಕಾಶ್ ಜೈನ್, ಡಾ. ಬಸವರಾಜ ಕೇಲಗಾರ, ವಾಸುದೇವ ಲದ್ವಾ ಮತ್ತಿತರರಿದ್ದರು.

**ಮೆರವಣಿಗೆ :** ಶಾಲಾ ವಿದ್ಯಾರ್ಥಿಗಳು, ಶಿಕ್ಷಕ - ಶಿಕ್ಷಕಿಯರು, ಜಾನಪದ ಕಲಾತಂಡಗಳು, ಕನ್ನಡಾಂಬೆಯ ಪಾತ್ರಧಾರಿಗಳು, ಭಾಗವಹಿಸಿದ್ದ ಮೈಲುದ್ದದ ಮೆರವಣಿಗೆಯಲ್ಲಿ, ಸರ್ವಾಧ್ಯಕ್ಷ ಜೆ.ಎಂ.ಮಠದ ಅವರನ್ನು ಸಿದ್ದೇಶ್ವರ ದೇವಸ್ಥಾನದಿಂದ ಎಪಿಎಂಸಿ ಸಮಾರಂಭ ಸ್ಥಳಕ್ಕೆ ಕರೆತರಲಾಯಿತು.

'ಕಡೆಗಣ್ಣಲ್ಲಿ ನೋಡಿದಿರೆನ್ನಯ್ಯ ಎನ್ನುವುದು' ಕೆ.ಹೆಚ್.ಮುಕ್ಕಣ್ಣನವರ ಪುಸ್ತಕವೂ ಸೇರಿದಂತೆ ಎಂಟು ಪುಸ್ತಕಗಳನ್ನು ಬಿಡುಗಡೆ ನಡೆಯಿತು.

ಪರಿಷತ್ ಧ್ವಜದ ಹಸ್ತಾಂತರ ಸಾಹಿತಿ ಸತೀಶ್ ಕುಲ್ಕರ್ಣಿ, ಸಿದ್ದು ಆರ್. ಜಿ.ಹಳ್ಳಿ, ವಾಸಣ್ಣ ಲದ್ವಾ, ವಾಸಪ್ಪ ಕುಸಗೂರ ಅವರುಗಳಿಗೆ ಸನ್ಮಾನಿಸಲಾಯಿತು.

ಬೆಳಿಗ್ಗೆ ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ ಪೂಜಾರ್ ಅವರಿಂದ ರಾಷ್ಟ್ರಧ್ವಜ, ಲಿಂಗಯ್ಯ ಅವರಿಂದ ಪರಿಷತ್ ಧ್ವಜ, ವೀರೇಶ ಜಂಬಗಿ ಅವರಿಂದ ನಾಡ ಧ್ವಜಾರೋಹಣ ನೆರವೇರಿತು.

## ಪತ್ರಕರ್ತೆ ಸಾಗರಿಕಾಗೆ ಟಿ.ಎಂ.ಸಿ. ಟಿಕೆಟ್

ಕೊಲ್ಕೊತಾ, ಫೆ. 11 - ಮುಂಬರುವ ರಾಜ್ಯಸಭಾ ಚುನಾವಣೆಯಲ್ಲಿ ಪತ್ರಕರ್ತೆ ಸಾಗರಿಕಾ ಘೋಸ್, ಪಕ್ಷದ ನಾಯಕ ಸುಶ್ಮಿತಾ ದೇವ್ ಹಾಗೂ ಇನ್ನಿಬ್ಬರಿಗೆ ಟಿಕೆಟ್ ನೀಡುವುದಾಗಿ ತೃಣಮೂಲ ಕಾಂಗ್ರೆಸ್ ಪ್ರಕಟಿಸಿದೆ. ರಾಜ್ಯಸಭಾ ಸ್ಥಾನಗಳಿಗಾಗಿ ನದೀಮುಲ್ ಹಕ್ ಹಾಗೂ ಮಮತಾ ಠಾಕೂರ್ ಅವರೂ ಟಿಕೆಟ್ ಪಡೆಯಲಿದ್ದಾರೆ ಎಂದು ಪಕ್ಷದ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಮುಂಗಾರು ಮಳೆ ಚೇತರಿಕೆ ನಿರೀಕ್ಷೆ

**(1ನೇ ಪುಟದಿಂದ)** ನೀನಾ ಮುನ್ಸೂಚನೆ ನೀಡುತ್ತಿವೆ. ಕೆಲವು ಎನ್ಸೊ - ತಟಸ್ಥ ಪರಿಸ್ಥಿತಿಯ ಸೂಚನೆ ನೀಡುತ್ತಿವೆ. ಆದರೆ, ಎಲ್ಲಾ ಮಾದರಿಗಳು ಎಲ್ ನೀನೋ ಅಂತ್ಯವಾಗುವುದಾಗಿ ತಿಳಿಸಿವೆ ಎಂದು ಹವಾಮಾನ ಇಲಾಖೆಯ ಹಿರಿಯ ವಿಜ್ಞಾನಿ ಡಿ. ಶಿವಾನಂದ ಪೈ ತಿಳಿಸಿದ್ದಾರೆ. ಬಲಿಷ್ಠ ಎಲ್ ನೀನೋ ಘಟನೆಗಳ ನಂತರ ಲಾ ನೀನಾ ಬರುವ ಐತಿಹಾಸಿಕ ಪದ್ಧತಿ ಇದೆ ಎಂದು ಎನ್.ಓ.ಎ.ಎ. ಸಂಸ್ಥೆ ತಿಳಿಸಿದೆ. ಕಳೆದ ವರ್ಷ ಭಾರತದಲ್ಲಿ ವಾಡಿಕೆಯ 868.6 ಮಿ.ಮೀ. ಮಳೆಯ ಬದಲು 820 ಮಿ.ಮೀ. ಮಳೆ ಸುರಿದಿತ್ತು. ಇದಕ್ಕೆ ಎಲ್ ನೀನೋ ಪ್ರಮುಖ ಕಾರಣ ಎಂದು ಹೇಳಲಾಗಿತ್ತು.

## ಶ್ರೀಲಂಕಾದಲ್ಲಿ ಐ.ಐ.ಟಿ. ಕ್ಯಾಂಪಸ್ ಸ್ಥಾಪನೆ

ನವದೆಹಲಿ, ಫೆ. 11 – ಐ.ಐ.ಟಿ.ಯ ಮೂರನೇ ಹೊರ ದೇಶದ ಕ್ಯಾಂಪಸ್ ಶ್ರೀಲಂಕಾದಲ್ಲಿ ಸ್ಥಾಪನೆಯಾಗಲಿದೆ. ಇದಕ್ಕಾಗಿ ಶ್ರೀಲಂಕಾ ಸರ್ಕಾರ ಮದ್ರಾಸ್ ಐ.ಐ.ಟಿ. ಸಂಪರ್ಕದಲ್ಲಿದೆ ಎಂದು ಮೂಲಗಳು ತಿಳಿಸಿವೆ. ಉನ್ನತ ಹಂತದ ನಿಯೋಗ ಇತ್ತೀಚೆಗೆ ಚೆನ್ನೈನ ಕ್ಯಾಂಪಸ್‌ಗೆ ಭೇಟಿ ನೀಡಿತ್ತು. ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತು ಚರ್ಚಿಸಲಾಗಿದೆ.

## ಅರ್ಬನ್ ಬ್ಯಾಂಕ್ ಚುನಾವಣೆ

**(1ನೇ ಪುಟದಿಂದ)** ದೃಶ್ಯ ಸಾಮಾನ್ಯವಾಗಿತ್ತು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಎಸ್.ಎಸ್. ಬಕ್ಕೇಶ್, ಹಿರಿಯ ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್, ಗಣ್ಯರಾದ ಎಸ್.ಕೆ. ವೀರಣ್ಣ, ರಮಣಲಾಲ್ ಸಂಘವಿ, ಐಗೂರು ಸಿ. ಚಂದ್ರಶೇಖರ್, ಕಿರುವಾಡಿ ಸೋಮಣ್ಣ, ಆವರಗೆರೆ ಕೆಂಚಪ್ಪ, ಚಿತ್ರ ನಿರ್ಮಾಪಕರಾದ ಮೇಕಾ ಮುರಳೀಕೃಷ್ಣ, ಯಜಮಾನ್ ಮೋತಿ ರಾಜೇಂದ್ರ, ಮೇಕಾ ಸತ್ಯನಾರಾಯಣ ಸೇರಿದಂತೆ ಅನೇಕ ಗಣ್ಯರು ಮತದಾನದ ಕೇಂದ್ರಕ್ಕೆ ಆಗಮಿಸಿ ಮತ ಚಲಾಯಿಸಿದರು.

**ಪ್ರಚಾರದ ಭರಾಟೆ :** ಮಧ್ಯ ಕರ್ನಾಟಕದ ಪ್ರಪ್ರಥಮ ಸಹಕಾರಿ ಬ್ಯಾಂಕ್ ಆಗಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಸರ್ವ ಧರ್ಮಗಳ ಸಮನ್ವಯ ಬ್ಯಾಂಕ್ ಎಂದೇ ಹೆಸರಾಗಿದೆ. ಎಲ್ಲಾ ವರ್ಗಗಳನ್ನೊಳಗೊಂಡಿರುವ ಷೇರುದಾರರು ಇಲ್ಲಿದ್ದು, ಅತಿ ಹೆಚ್ಚು ಷೇರುದಾರರು ಮತ್ತು ಠೇವಣಿ ಹೊಂದಿರುವ ಪ್ರಪ್ರಥಮ ಬ್ಯಾಂಕ್ ಎಂಬ ಕೀರ್ತಿಗೆ ಪಾತ್ರವಾಗಿದೆ. ಈ ಹಿನ್ನೆಲೆಯಲ್ಲಿ 5 ವರ್ಷಗಳಿಗೊಮ್ಮೆ ನಡೆಯುವ ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆಯು ಪ್ರತಿ ಬಾರಿಗಿಂತ ಈ ಸಲ ಭರ್ಜರಿಯಾಗಿ ನಡೆಯಿತು.

ಬ್ಯಾಂಕಿನ ಷೇರುದಾರರಲ್ಲಿ ಅನೇಕರು ಕಾರಣಾಂತರಗಳಿಂದ ಹರಿಹರ, ಮಲೇಬೆನ್ನೂರು, ರಾಣೇಬೆನ್ನೂರು, ಹಾವೇರಿ, ಹುಬ್ಬಳ್ಳಿ, ಬೆಂಗಳೂರು ಸೇರಿದಂತೆ ನಾಡಿನ ವಿವಿಧ ಭಾಗಗಳಲ್ಲಿ ವಾಸವಾಗಿದ್ದು, ಅಲ್ಲಿಂದ ಬಂದು ಮತದಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಇದು, ಆ ಬ್ಯಾಂಕಿನ ವರ್ಚಸ್ಸು ಎಂದರೆ ತಪ್ಪಾಗಲಾರದು.

**ಫಲಿತಾಂಶಕ್ಕೆ ತಡೆ :** ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಇಂದು ಮತದಾನದ ಪ್ರಕ್ರಿಯೆ ಮಾತ್ರ ನಡೆದಿದ್ದು, ಇದೇ ದಿನಾಂಕ 13 ರಂದು ನಡೆಯುವ ಕೋರ್ಟಿನ ವಿಚಾರಣೆ ನಂತರ ಕೋರ್ಟ್ ಕೊಡುವ ದಿನಾಂಕದಂದು ಮತಗಳ ಎಣಿಕೆ ಕಾರ್ಯ ನಡೆದು ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಶಿವಮೊಗ್ಗ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರೂ ಆಗಿರುವ ದಾವಣಗೆರೆ ಅರ್ಬನ್ ಕೋ - ಆಪರೇಟಿವ್ ಬ್ಯಾಂಕ್ ಚುನಾವಣಾಧಿಕಾರಿ ಎನ್.ಜಿ. ರುದ್ರಪ್ಪ ತಿಳಿಸಿದ್ದಾರೆ.

ಬ್ಯಾಂಕಿನ ಒಟ್ಟು 12,500ಕ್ಕೂ ಹೆಚ್ಚು ಷೇರುದಾರರಾರಲ್ಲಿ 6,019 ಅರ್ಹ ಮತದಾರರಾಗಿದ್ದರು. ಸಹಕಾರ ಇಲಾಖೆಯ ಕೆಲ ನಿಬಂಧನೆಗಳಿಂದಾಗಿ 6193 ಮತದಾದರು ಅನರ್ಹಗೊಂಡಿದ್ದರು.

ಈ ಕಾರಣದಿಂದಾಗಿ ಬ್ಯಾಂಕಿನ ಆಡಳಿತ ಮಂಡಳಿಯು ಕೈಗೊಂಡ ತೀರ್ಮಾನದಂತೆ ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಅವರು, ಮತದಾನದ ಪ್ರಕ್ರಿಯೆಯಿಂದ 6193 ಮತದಾರರು ವಂಚಿತರಗೊಳ್ಳದಂತೆ ಅವರನ್ನೂ ಅರ್ಹ ಮತದಾರರೆಂದು ಘೋಷಿಸಬೇಕು ಎಂದು ಮನವಿ ಮಾಡಿಕೊಂಡು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ಪುರಸ್ಕರಿಸಿದ್ದ ಹೈಕೋರ್ಟ್, ಸದ್ಯಕ್ಕೆ ಅನರ್ಹಗೊಂಡಿರುವ 6193 ಮತದಾರರಿಗೂ ಮತದಾನ ಮಾಡಲು ಅವಕಾಶ ಮಾಡಿಕೊಟ್ಟು ಚುನಾವಣೆ ನಡೆಸಬೇಕು ಎಂದು ತಿಳಿಸಿ, ವಿಚಾರಣೆಯನ್ನು ಇದೇ ದಿನಾಂಕ 13ಕ್ಕೆ ಮುಂದೂಡಿತ್ತು.

# ರೈತರು ಡಿಸಿಸಿ ಬ್ಯಾಂಕಿನಲ್ಲಿ ವ್ಯವಹಾರ ಮಾಡಿದರೆ ಮಾತ್ರ ಕೃಷಿ ಸಹಕಾರ ಸಂಘಗಳು ಉಳಿಯುತ್ತವೆ

ಮಲೇಬೆನ್ನೂರು, ಫೆ.11- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಜಿಲ್ಲೆಯಲ್ಲಿ 25 ಶಾಖೆಗಳನ್ನು ಮತ್ತು 184 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಹೊಂದಿದ್ದು, 3-4 ಶಾಖೆಗಳನ್ನು ಹೊರತುಪಡಿಸಿ, ಉಳಿದ ಶಾಖೆಗಳು ನಷ್ಟದಲ್ಲಿವೆ ಎಂದು ಡಿಸಿಸಿ ಬ್ಯಾಂಕಿನ ನೂತನ ಉಪಾಧ್ಯಕ್ಷ ಹನಗವಾಡಿ ಡಿ.ಕುಮಾರ್ ಹೇಳಿದರು.



ಹನಗವಾಡಿ : ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿದ ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಡಿ.ಕುಮಾರ್ ಮನವಿ

ಅವರು, ಶನಿವಾರ ಸಂಜೆ ಹನಗವಾಡಿ ಗ್ರಾಮದಲ್ಲಿ ಗ್ರಾಮಸ್ಥರು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಡಿಸಿಸಿ ಬ್ಯಾಂಕಿಗೆ ಹಳ್ಳಿಗಳಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಜೀವಾಳವಾಗಿದ್ದು, ಸಹಕಾರ ಸಂಘಗಳು ಖಾಸಗಿ ಬ್ಯಾಂಕುಗಳಂತೆ ಕಾರ್ಯ ನಿರ್ವಹಿಸಿದಾಗ ಮಾತ್ರ ಪ್ರಗತಿ ಸಾಧ್ಯ ಎಂದು ಕುಮಾರ್ ಅವರು ಹೇಳಿದರು.

ಕೆಲವು ರೈತರು ಬಡ್ಡಿ ರಹಿತ ಕೃಷಿ ಸಾಲವನ್ನು ಡಿಸಿಸಿ ಬ್ಯಾಂಕಿನಿಂದ ಪಡೆದು, ನಂತರ ಆ ಹಣವನ್ನು ಖಾಸಗಿ ಬ್ಯಾಂಕಿನಲ್ಲಿ ಠೇವಣಿ ಮಾಡುತ್ತಿದ್ದಾರೆ. ಹೀಗಾದರೆ ಡಿಸಿಸಿ ಬ್ಯಾಂಕ್ ಅಭಿವೃದ್ಧಿ ಹೊಂದಲು ಹೇಗೆ ಸಾಧ್ಯ ? ಎಂದು ಪ್ರಶ್ನಿಸಿದರು.

ಕೆಲವು ಸಂಘಗಳು ಒಂದು ಕುಟುಂಬದ ಹಿಡಿತದಲ್ಲಿದ್ದು, ಅವರು ಬಂಧು-ಬಳಗದವರಿಗೆ ಸಾಲ ಕೊಡಿಸಿದ್ದಾರೆ. ಅದನ್ನು ಮೊದಲು ತಪ್ಪಿಸುತ್ತೇವೆ. ಕೆಲವು ಕಾರ್ಯದರ್ಶಿಗಳು ಯಾರ ಹಿಡಿತಕ್ಕೂ ಸಿಗದೇ, ಮೈಗೆ ಎಣ್ಣೆ ಹಚ್ಚಿಕೊಂಡು ಓಡಾಡುತ್ತಿದ್ದಾರೆ. ಅಂತಹವರಿಗೂ ಲಗಾಮು ಹಾಕಲು ಈಗಿನ ಆಡಳಿತ ಮಂಡಳಿ ನಿರ್ಧರಿಸಿದೆ. ಅಲ್ಲದೇ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು, ಡಿಸಿಸಿ ಬ್ಯಾಂಕಿನ ಪ್ರಗತಿ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದಾರೆ. ಇದರ ಮೊದಲ ಪ್ರಯತ್ನವಾಗಿ ಏಪ್ರಿಲ್ 1 ರಿಂದ ಡಿಸಿಸಿ ಬ್ಯಾಂಕಿನಲ್ಲಿ ಎಲ್ಲಾ ಆನ್‌ಲೈನ್ ಸೇವೆಗಳು ಲಭ್ಯವಾಗಲಿದ್ದು, ಸಹಕಾರ ಸಂಘಗಳನ್ನು ಸಂಪೂರ್ಣವಾಗಿ ಕಂಪ್ಯೂಟರೀಕರಣ ಮಾಡಲಾಗುವುದು ಎಂದರು.

ಹರಿಹರ ತಾಲ್ಲೂಕಿನಲ್ಲಿ 3-4 ಸಂಘಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಸಂಘಗಳು ಉತ್ತಮ ಸ್ಥಿತಿಯಲ್ಲಿವೆ. ಹನಗವಾಡಿ ಗ್ರಾಮದ ಸಹಕಾರ ಸಂಘಕ್ಕೆ 50 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರ ಆಶಯದಂತೆ, ಸಂಘದ ಸುವರ್ಣ ಮಹೋತ್ಸವವನ್ನು ಅರ್ಥಪೂರ್ಣವಾಗಿ ಮಾಡುವುದಾಗಿ ಕುಮಾರ್ ಭರವಸೆ ನೀಡಿದರು.

ಹನಗವಾಡಿ ಗ್ರಾ.ಪಂ. ಅಧ್ಯಕ್ಷ ಬಿ.ಎನ್. ತಿಪ್ಪೇಶ್ ಅಧ್ಯಕ್ಷತೆ ವಹಿಸಿದ್ದರು. ಗ್ರಾಮದ ಹಿರಿಯ ಮುಖಂಡ ಕ್ಯಾತನಹಳ್ಳಿ ಬಸಪ್ಪಜ್ಜ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಡಿ.ಕುಮಾರ್ ಅವರು ಡಿಸಿಸಿ ಬ್ಯಾಂಕಿಗೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮ್ಮೂರಿಗೆ ಹೆಮ್ಮೆ ಆಗಿದೆ. ಅವರು, ಸದಾ ರೈತ ಪರ ಸೇವೆ ಸಲ್ಲಿಸಲಿ ಎಂದರು.

ಗ್ರಾಮದ ಕೆ.ಶರಣಪ್ಪಯ್ಯ, ಹೊಸಳ್ಳಿ ವೀರಭದ್ರಪ್ಪ, ವಕೀಲ ದೊಡ್ಡಮನಿ ಮಂಜುನಾಥ್, ಹರಗನಹಳ್ಳಿಯ ಕೆ.ರಾಜು ಮಾತನಾಡಿದರು.

ಗ್ರಾ.ಪಂ. ಉಪಾಧ್ಯಕ್ಷರಾದ ದಾಕ್ಷಾಯಣಮ್ಮ, ಪಿಎಸಿಎಸ್ ಅಧ್ಯಕ್ಷ ಡಿ.ಗಿರೀಶ್, ಸಣ್ಣಮನಿ ಶಿವಪ್ಪ, ಕೆ.ಹನುಮಂತಪ್ಪ, ಸಣ್ಣಮನಿ ಉಮಾಪತಿ, ಶ್ರೀಮತಿ ಬಸಮ್ಮ, ಡಿ.ಸಾಯಿನಾಥ್, ಬೆಳಕೆರೆ ಹಾಲಪ್ಪ ಮೇಷ್ಟ್ರು, ಕೆ.ವೀರಭದ್ರಪ್ಪ, ಗೌಡ್ರ ಶಂಕ್ರಪ್ಪ, ಎಸ್.ಮಹೇಶ್ವರಪ್ಪ, ಮಾಕನೂರು ರೇವಣಪ್ಪ, ಯುವ ಮುಖಂಡರಾದ ಆರ್. ಸಿ.ವಿಜಯಕುಮಾರ್, ಗುರು, ಸಾರಥಿ ಮಂಜುನಾಥ್, ಬಿ.ಸಿದ್ದೇಶ್, ಸಾರಥಿ ಶಂಭುಲಿಂಗಪ್ಪ, ಹೊಸಳ್ಳಿ ಬಸವರಾಜ್, ಅಪ್ಪಿ, ಆರ್.ಟಿ.ವಿಜಯಕುಮಾರ್, ಸಾರಥಿ ಉಮೇಶ್, ರೈತ ಸಂಘದ ರುದ್ರೇಶ್, ಕೆ.ಪಾಲಾಕ್ಷಪ್ಪ, ಬೆಳ್ಳೂಡಿ ಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಅಂಗದಾನದಲ್ಲಿ ಲಿಂಗ ಭೇದ : ಪುರುಷರ ಪಾಲು ಶೇ.80

ನವದೆಹಲಿ, ಫೆ. 11 - 1995ರಿಂದ 2021ರ ನಡುವೆ 36,640 ಅಂಗದಾನಗಳು ನಡೆದಿವೆ. ಅಂಗದಾನ ಪಡೆದವರಲ್ಲಿ ಶೇ.80ರಷ್ಟು ಪುರುಷರಾಗಿದ್ದಾರೆ ಎಂದು ಸರ್ಕಾರಿ ಅಂಕಿ-ಅಂಶಗಳು ತಿಳಿಸಿವೆ.

ಕೇಂದ್ರ ಆರೋಗ್ಯ ಖಾತೆ ಅಧೀನ ಸಚಿವ ಎಸ್.ಪಿ. ಸಿಂಗ್ ಬಾಘೇಲ್ ಅವರು ಲೋಕಸಭೆಗೆ ಈ ಬಗ್ಗೆ ಶುಕ್ರವಾರ ಮಾಹಿತಿ ನೀಡಿದ್ದಾರೆ. 29,695 ಪುರುಷರು ಹಾಗೂ 6,945 ಮಹಿಳೆಯರು ಅಂಗದಾನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ ಎಂದವರು ತಿಳಿಸಿದ್ದಾರೆ.

2019ರಲ್ಲಿ ಅಂಗದಾನ ಪಡೆದ ಮಹಿಳೆಯರ ಪ್ರಮಾಣ ಶೇ.27.6 ರಷ್ಟಿತ್ತು. ಅದು 2022ರಲ್ಲಿ ಶೇ.30ಕ್ಕೆ ಹೆಚ್ಚಾಗಿದೆ. ಕೇಂದ್ರ ಸರ್ಕಾರ ರಾಷ್ಟ್ರೀಯ ಅಂಗದಾನ ಯೋಜನೆಯನ್ನು ರೂಪಿಸಿದೆ. ಈ ಮೂಲಕ ಅಂಗದಾನಿಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. ಅಂಗ ಕಸಿಯಲ್ಲಿ ಲಿಂಗ ಅಂತರ ನಿವಾರಿಸಲು ಅರಿವು ಹಾಗೂ ಸಂವೇದನಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ಸಚಿವ ಬಾಘೇಲ್ ಹೇಳಿದ್ದಾರೆ.

## ಉತ್ತರ ಪ್ರದೇಶದ 300ಕ್ಕೂ ಹೆಚ್ಚು ಶಾಸಕರಿಂದ ರಾಮ ಮಂದಿರ ಭೇಟಿ

ಅಯೋಧ್ಯೆ, ಫೆ. 11 – ಉತ್ತರ ಪ್ರದೇಶದ 300ಕ್ಕೂ ಹೆಚ್ಚು ಶಾಸಕರು ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡಿದ್ದಾರೆ. ಪ್ರತಿಪಕ್ಷವಾದ ಸಮಾಜವಾದಿ ಪಕ್ಷದ ಶಾಸಕರು ಮಾತ್ರ ಗೈರಾಗಿದ್ದಾರೆ.

ಉತ್ತರ ಪ್ರದೇಶದ ವಿಧಾನಸಭೆ ಪ್ರಸಕ್ತ 399 ಶಾಸಕರನ್ನು ಹೊಂದಿದೆ. ಇವರ ಜೊತೆಗೆ ಪರಿಷತ್‌ನ 100 ಶಾಸಕರೂ ದೇವಾಲಯ ನಗರಕ್ಕೆ ಆಗಮಿಸಿದ್ದರು. 325 ಶಾಸಕರು ಅಯೋಧ್ಯೆಗೆ ಆಗಮಿಸಿದ್ದರು ಎಂದು ಮೂಲಗಳು ತಿಳಿಸಿವೆ.

## ಇಮಾಮ್ ಮೇಷ್ಟ್ರಿಗೆ ಬಿ. ವೀರಣ್ಣ ಸನ್ಮಾನ



ದಾವಣಗೆರೆ, ಫೆ. 11- ನಗರದ ಶಿಕ್ಷಣ ತಜ್ಞ, ನಿವೃತ್ತ ಮುಖ್ಯೋಪಾಧ್ಯಾಯ ಕೆ. ಇಮಾಂ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಅವರು ಸನ್ಮಾನಿಸಿ, ಗೌರವಿಸಿದರು.


|| ಶ್ರೀ ಗುರು ರೇಣುಕಾಚಾರ್ಯ ಪ್ರಸೀದಂತು ||

|| ಶ್ರೀ ವೀರಭದ್ರೇಶ್ವರ ಪ್ರಸನ್ನ || || ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

**ಗುರು ಲಿಂಗ ಜಂಗಮಾರಾಧನೆ ಆಹ್ವಾನ**



ಜನನ : 29.07.1933 ಲಿಂಗೈಕ್ಯ 28.01.2024

ವೇ|| ಷ|| ಬ್ರ|| ಶ್ರೀ ರೇವಣಸಿದ್ದ ಶಿವಚಾರ್ಯ ಮಹಾಸ್ವಾಮಿಗಳು ಉಚ್ಚಂಗಿ ದುರ್ಗದ ಕಟ್ಟಿಮನೆ ರಾಜಗುರು ಪುರವರ್ಗ ಮಠ, ರಾಮಘಟ್ಟ, ಹರಪನಹಳ್ಳಿ ತಾ. ಇವರ ದಿವ್ಯ ಸಾನ್ನಿಧ್ಯದಲ್ಲಿ ದಾವಣಗೆರೆ ಜಿಲ್ಲೆ, ತಾ. ಕುರುಡಿ ಗ್ರಾಮದ ವಾಸಿಗಳಾದ

**ಕುರುಡಿ ಮಠದ ಶ್ರೀ ಕೆ.ಎಂ. ನೀಲಕಂಠಯ್ಯ,** ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 28.01.2024ನೇ ಭಾನುವಾರ ಬೆಳಿಗ್ಗೆ 9.10 ಗಂಟೆಗೆ ನನ್ನ ತಮ್ಮನಾದ

**ಶ್ರೀ ವೇ|| ಕುರುಡಿಮಠದ ರೇವಣಸಿದ್ದಯ್ಯ**

(ನಿವೃತ್ತ ಮುಖ್ಯ ಶಿಕ್ಷಕರು)

ಇವರು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.ತತ್ಸಬಂಧ ಮೃತರ ಆತ್ಮಶಾಂತಿಗಾಗಿ

**"ಗುರು ಲಿಂಗ ಜಂಗಮಾರಾಧನೆ"ಯನ್ನು**

ದಿನಾಂಕ : 12.02.2024ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಮೃತರ ಸ್ವಗೃಹ, #3992/132, 16ನೇ ಕ್ರಾಸ್, ಆಂಜನೇಯ ಬಡಾವಣೆ, ನೂತನ ಕಾಲೇಜು ಎದುರು, ದಾವಣಗೆರೆ ಇಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದಃಖತಪ್ತರು : ಕೆ.ಎಂ. ಮಂಜುನಾಥ, ಕೆ.ಎಂ. ರವಿ, ನಿ. ಪ್ರಾಂಶುಪಾಲರು, ಕೆ.ಎಂ. ಕೊಟ್ರೇಶ್ ಮತ್ತತು ಸೊಸೆಯಂದಿರು, ಮೊಮ್ಮಕ್ಕಳು ಕುರುಡಿ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ : 98457 46618, 80734 97593, 98805 01801

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಪೇಟಿಎಂ ವಿದೇಶಿ ಹೂಡಿಕೆ : ಕೇಂದ್ರ ಸರ್ಕಾರದ ಪರಿಶೀಲನೆ

**(1ನೇ ಪುಟದಿಂದ)** ಬಿ.ಐ., ಕಂಪನಿ ಹೊಸದಾಗಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿತ್ತು. ಪಿ.ಪಿ.ಎಸ್.ಎಲ್. ನಿರ್ವಹಿಸುವ ಒನ್97 ಕಮ್ಯುನಿಕೇಷನ್ಸ್ ಕಂಪನಿಯು ಚೀನಾದಿಂದ ಹೂಡಿಕೆ ಪಡೆದಿದೆ. ಚೀನಾದ ಆಂಟ್ ಗ್ರೂಪ್ ಕಂಪನಿಯು ಹೂಡಿಕೆ ಮಾಡಿದೆ. ಭಾರತದ ಜೊತೆ ಗಡಿ ಹಂಚಿಕೊಂಡಿರುವ ಯಾವುದೇ ದೇಶದಿಂದ ಹೂಡಿಕೆ ಪಡೆಯುವುದಕ್ಕೆ ಮುಂಚೆ ಸರ್ಕಾರದಿಂದ ಪೂರ್ವಾನುಮತಿ ಹೊಂದಿರಬೇಕಿದೆ. ಈ ಅನುಮತಿ ಪಡೆಯಲಾಗಿದೆಯೇ ಎಂಬ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಲಿದೆ.


**ದ್ಯಾಮೇನಹಳ್ಳಿ ಶ್ರೀಮತಿ ಗೌರಮ್ಮ ನಿಧನ**



ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ದ್ಯಾಮೇನಹಳ್ಳಿ ಗ್ರಾಮದ ವಾಸಿ ಡಿ.ಜಿ. ಶರಣಪ್ಪನವರ (ನಿವೃತ್ತ ಡಿ.ವೈ.ಎಸ್.ಪಿ) ಧರ್ಮಪತ್ನಿ

**ಶ್ರೀಮತಿ ಗೌರಮ್ಮ**

ಇವರು, ದಿನಾಂಕ : 11.02.2024ರ ಭಾನುವಾರ ಸಂಜೆ 6.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಇಬ್ಬರು ಪುತ್ರರು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.02.2024ರ ಸೋಮವಾರ ಬೆಳಿಗ್ಗೆ 12ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು, ಮಾಯಕೊಂಡ ಹೋಬಳಿ ದ್ಯಾಮೇನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**

ದ್ಯಾಮೇನಹಳ್ಳಿ ಗೌಡ್ರು ವಂಶಸ್ಥರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಬಂಧು-ಬಳಗ, **98440 40729**


## ಸುತ್ತೂರು ಮಠ ನಿಸ್ವಾರ್ಥ ಸೇವಾ ಕೇಂದ್ರ

**(1ನೇ ಪುಟದಿಂದ)** ರಾಜಕೀಯ ಜೀವನದಲ್ಲಿ ಅತಿ ಹೆಚ್ಚು ಮಾರ್ಗದರ್ಶನ ಮಾಡಿದವರು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳು ಹಾಗೂ ಸುತ್ತೂರು ಶ್ರೀಗಳು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀಗಳು ಅಮಿತ್ ಷಾ ಅವರಿಗೆ ಚಾಮುಂಡೇಶ್ವರಿ ದೇವಿಯ ಮೂರ್ತಿಯನ್ನು ನೀಡಿ ಗೌರವಿಸಿದರು.

ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡಲಾದ ಮೂರ್ತಿಯನ್ನು ರೂಪಿಸಿದ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಸನ್ಮಾನಿಸಲಾಯಿತು.

ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಂಸದ ಪ್ರತಾಪ ಸಿಂಹ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತಿತರರು ಉಪಸ್ಥಿತರಿದ್ದರು.

## ರಾಜ್ಯಸಭೆಗೆ ಸ್ಪರ್ಧಿಸಲು ಭಾಂಡಗೆಗೆ ಬಿಜೆಪಿ ಟಿಕೆಟ್

ಬೆಂಗಳೂರು, ಫೆ.11 - ರಾಜ್ಯಸಭೆ ಚುನಾವಣೆಗಾಗಿ ನಾರಾಯಣಸಾ ಭಾಂಡಗೆ ಅವರಿಗೆ ಬಿಜೆಪಿ ಟಿಕೆಟ್ ನೀಡಿರುವುದು ರಾಜಕೀಯ ವಲಯದಲ್ಲಿ ಅಚ್ಚರಿಗೆ ಕಾರಣವಾಗಿದೆ. ರಾಜ್ಯದಿಂದ ಕೇಂದ್ರದಲ್ಲಿ ಸಚಿವರಾಗಿರುವ ರಾಜೀವ್ ಚಂದ್ರಶೇಖರ್ ಹಾಗೂ ಮಾಜಿ ಸಚಿವ ವಿ. ಸೋಮಣ್ಣ ಅವರ ಹೆಸರು ಪ್ರಮುಖವಾಗಿ ಕೇಳಿ ಬರುತ್ತಿತ್ತು.

ನಾರಾಯಣಸಾ ಕೃಷ್ಣಸಾ ಭಾಂಡಗೆ ಅವರು ಬಾಗಲಕೋಟೆ ಮೂಲದವರಾಗಿದ್ದು, ಈ ಹಿಂದೆ ವಿಧಾನ ಪರಿಷತ್ ಸದಸ್ಯರಾಗಿದ್ದರು. ಅವರು ಬಿಜೆಪಿಯ ಒ.ಬಿ.ಸಿ. ಘಟಕದ ನಾಯಕರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಹಾಗೂ ರಾಜ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ನನಗೆ ರಾಜ್ಯಸಭೆ ಚುನಾವಣೆಗೆ ಟಿಕೆಟ್ ನೀಡಿದ್ದು ಪಕ್ಷದ ಕಾರ್ಯಕರ್ತರಿಗೆ ಸಂದ ಗೌರವ. ಸಾಮಾನ್ಯ ಕಾರ್ಯಕರ್ತನಿಗೂ ಉನ್ನತ ಸ್ಥಾನದ ಅವಕಾಶ ದೊರೆಯುವುದು ಬಿಜೆಪಿಯಲ್ಲಿ ಮಾತ್ರ ಸಾಧ್ಯ ಎಂದು ಭಾಂಡಗೆ ಹೇಳಿದ್ದಾರೆ. ನನಗೆ ಪಕ್ಷ ನೀಡಿದ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ, ನಾನಾ ಹೋರಾಟಗಳಲ್ಲಿ ಜೈಲುವಾಸ ಅನುಭವಿಸಿದ್ದೇನೆ. ನನ್ನನ್ನು ಗುರುತಿಸಿ ಗೌರವಿಸಿದ ಪಕ್ಷದ ಮುಖಂಡರಿಗೆ ಧನ್ಯವಾದ ಸಲ್ಲಿಸುವುದಾಗಿ ಅವರು ತಿಳಿಸಿದ್ದಾರೆ.

## ಫಲಿತಾಂಶ ಪ್ರಶ್ನಿಸಿ ಕೋರ್ಟ್‌ನಲ್ಲಿ ಅರ್ಜಿಗಳ ಸರಮಾಲೆ

**(1ನೇ ಪುಟದಿಂದ)** ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಸಿಂಧ್ ಹೈಕೋರ್ಟ್‌ನಲ್ಲಿ ಮೂರು ಅರ್ಜಿಗಳನ್ನು ದಾಖಲಿಸಲಾಗಿದೆ. ಚುನಾವಣಾ ಆಯೋಗ ಇನ್ನೂ ಪೂರ್ಣ ಫಲಿತಾಂಶ ಪ್ರಕಟಿಸಿಲ್ಲ.

ಪಾಕಿಸ್ತಾನ ತೆಹ್ರೀಕ್ - ಎ - ಇನ್ಸಾಫ್ (ಪಿ.ಟಿ.ಐ.) ಪಕ್ಷ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು ರಾಷ್ಟ್ರೀಯ ಸದನದ ಚುನಾವಣೆಯಲ್ಲಿ 102 ಸ್ಥಾನ ಪಡೆದಿದ್ದಾರೆ. ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಪಿ.ಎಂ.ಎಲ್. - ಎನ್. ಪಕ್ಷ 74 ಸ್ಥಾನ ಪಡೆದಿವೆ. ಪಿ.ಪಿ.ಪಿ. 54 ಹಾಗೂ ಎಂ.ಕ್ಯೂ.ಎಂ. ಪಕ್ಷ 17 ಸ್ಥಾನ ಪಡೆದಿದೆ. 265 ಸ್ಥಾನಗಳ ಪೈಕಿ 259 ಸ್ಥಾನಗಳ ಫಲಿತಾಂಶ ಪ್ರಕಟಿಸಲಾಗಿದೆ.

ಪಂಜಾಬ್ ಮಾಜಿ ಮುಖ್ಯಮಂತ್ರಿ ಪರ್ವೇಜ್ ಇಲಾಹಿ ಹಾಗೂ ಅವರ ಪತ್ನಿ ಕೈಸೆರಾ ಸೇರಿದಂತೆ ಪಿ.ಟಿ.ಐ. ಬೆಂಬಲಿತ ಹಲವು ಸ್ವತಂತ್ರ ಅಭ್ಯರ್ಥಿಗಳು ಫಲಿತಾಂಶ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.

## ರೈತರ ಪ್ರತಿಭಟನೆ ದೆಹಲಿ ಪ್ರವೇಶಿಸದಂತೆ ತಡೆ

ನವದೆಹಲಿ, ಫೆ. 11 – ರೈತ ಸಂಘಟನೆಗಳು ಮಂಗಳವಾರ ದೆಹಲಿ ಚಲೋಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಹರಿಯಾಣ ಮತ್ತು ದೆಹಲಿ ಅಧಿಕಾರಿಗಳು ಗಡಿಗಳಲ್ಲಿ ತಡೆಗಳನ್ನು ನಿರ್ಮಿಸಿದ್ದಾರೆ. ವಾಹನಗಳ ಪ್ರವೇಶ ತಡೆಯಲು ಸಾವಿರಾರು ಪೊಲೀಸರನ್ನು ನಿಯೋಜಿಸಲಾಗಿದೆ. ರೈತ ಸಂಘಟನೆಗಳ ಬೇಡಿಕೆಗಳ ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ಸೋಮವಾರದಂದು ಮುಖಂಡರ ಸಭೆ ಕರೆದಿದೆ. ಪ್ರತಿಭಟನಾಕಾರರು ರಾಜಧಾನಿಗೆ ಬರದಂತೆ ತಡೆಯುತ್ತಿರುವ ಕ್ರಮವನ್ನು ಪ್ರತಿಪಕ್ಷಗಳು ಹಾಗೂ ರೈತ ಸಂಘಟನೆಗಳು ಟೀಕಿಸಿವೆ.

2020-21ರ ಪ್ರತಿಭಟನೆಯು ಒಂದು ವರ್ಷದ ಕಾಲ ನಡೆದಿತ್ತು. ಈ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳಲು ನಿರ್ಬಂಧ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಇತರೆ ಕೆಲ ರೈತ ಸಂಘಟನೆಗಳು ಪ್ರತಿಭಟನೆಗೆ ಕರೆ ನೀಡಿವೆ. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಕಾಯ್ದೆ ಜಾರಿಗೆ ತರಬೇಕು ಎಂಬುದು ರೈತ ಸಂಘಟನೆಗಳ ಪ್ರಮುಖ ಬೇಡಿಕೆಯಾಗಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas



# ಯೋಜನೆಗಳಿಂದ ವಿಶೇಷ ಚೇತನರ ಬದುಕು ಹಸನಾಗಬೇಕು : ಡಿಸಿ

ದಾವಣಗೆರೆ, ಫೆ. 11 - ವಿಶೇಷ ಚೇತನರ ಬದುಕು ಹಸನು ಮಾಡುವ ಹಾಗೂ ಅವರ ಜೀವನ ಮಟ್ಟ ಸುಧಾರಿಸುವ ರೀತಿಯಲ್ಲಿ ಸರ್ಕಾರದ ಯೋಜನೆಗಳನ್ನು ತಲುಪಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯ್ತಿ ಮತ್ತು ಸ್ಫೂರ್ತಿ ಸಂಸ್ಥೆ, ದಾವಣಗೆರೆ ಇವುಗಳ ಸಂಯುಕ್ತಾ ಶ್ರಯದಲ್ಲಿ ಪಾಲಿಕೆ ಹಾಗೂ ವಿವಿಧ ಇಲಾಖೆಗಳ ಶೇ.5ರ ಅನುದಾನದಡಿಯಲ್ಲಿ ವಿಶೇಷ ಚೇತನರ ಕಲ್ಯಾಣ ನಿಧಿಯ ಕ್ರಿಯಾ ಯೋಜನೆ ಹಾಗೂ ಅಡೆ - ತಡೆ ರಹಿತ ಕುರಿತ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಿಮೋಫಿಲಿಯಾ ಹಾಗೂ ತಲಸೇಮಿಯ ರೀತಿಯ ಸಮಸ್ಯೆ ಎದುರಿಸುತ್ತಿರುವವರೂ 2016ರ ವಿಶೇಷಚೇತನರ ಕಾಯ್ದೆಯಡಿ ಬರುತ್ತಾರೆ. ಹೀಗಾಗಿ ಅಧಿಕಾರಿಗಳು ಸೌಲಭ್ಯಗಳನ್ನು ಕಲ್ಪಿಸುವಾಗ ಮೂಗಿನ ನೇರಕ್ಕೆ ಯೋಚಿಸದೇ, ಎಲ್ಲ ರೀತಿಯ ವಿಶೇಷಚೇತನರ ಅಗತ್ಯ ಪರಿಗಣಿಸಬೇಕು ಎಂದರು.

ವಿಶೇಷಚೇತನರು ತಂತ್ರಜ್ಞಾನ ಬಳಕೆ ಮಾಡಿಕೊಂಡು ಉತ್ತಮ ಬದುಕು ಕಂಡುಕೊಳ್ಳುವ ವ್ಯವಸ್ಥೆ ರೂಪಿಸಬೇಕು. ಇದಕ್ಕಾಗಿ ಅಧಿಕಾರಿಗಳು ಕಂಕಣಬದ್ಧವಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಿವಿಲ್ ನ್ಯಾಯಮೂರ್ತಿ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣವರ ಮಾತನಾಡಿ, ವಿಶೇಷಚೇತನರು ನೆರವು ಪಡೆಯುವುದು ಅವರ ಹಕ್ಕು. ಇದನ್ನು ಅನುಕಂಪ ಎಂದು ಭಾವಿಸಬೇಕಿಲ್ಲ ಎಂದರು.

ವಿಶೇಷ ಚೇತನರ ಕುರಿತ ಕ್ರಿಯಾ ಯೋಜನೆ ರೂಪಿಸುವಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳಲ್ಲಿ ಇಚ್ಛಾಶಕ್ತಿಯ ಕೊರತೆ ಕಂಡು ಬರುತ್ತದೆ. ಮಾರ್ಚ್ ಹತ್ತಿರ ಬಂದಾಗ ಯೋಜನೆ ರೂಪಿಸುವ ಬದಲು, ಆರ್ಥಿಕ ವರ್ಷದ ಆರಂಭದಲ್ಲೇ ಯೋಜನೆ ರೂಪಿಸಬೇಕು ಎಂದು ತಿಳಿಸಿದರು.

ಕೆಲವು ವಿಶೇಷಚೇತನರು ತಮ್ಮ ಹಕ್ಕುಗಳ ದುರ್ಬಳಕೆ ಮಾಡಿಕೊಳ್ಳುವುದೂ ಕಂಡು ಬಂದಿದೆ. ಸರ್ಕಾರ ನಿಯಮಗಳಲ್ಲಿ ಅವಕಾಶವಿಲ್ಲದಿದ್ದರೂ ಇಂಥದೇ ನೆರವು ಬೇಕೆಂಬ ದೂರುಗಳನ್ನು ದಾಖಲಿಸುತ್ತಿದ್ದಾರೆ. ಇಂತಹ ಪ್ರವೃತ್ತಿ ಬಿಡಬೇಕು ಎಂದೂ ಅವರು ಕಿವಿಮಾತು ಹೇಳಿದರು.

ಜಿಲ್ಲಾ ಪಂಚಾಯ್ತಿ ಯೋಜನಾ ಅಧಿಕಾರಿ ಕೆ. ಮಲ್ಲಾನಾಯ್ಕ ಮಾತನಾಡಿ, ಅನುದಾನದಲ್ಲಿ ವಿಶೇಷ ಚೇತನರ ಅನುದಾನ ಶೇ.5ಕ್ಕೆ ಸೀಮಿತವಲ್ಲ. ಅದಕ್ಕೂ ಹೆಚ್ಚಿನ ಅನುದಾನ ನೀಡಲು ಕಾಯ್ದೆಯಲ್ಲಿ ಅವಕಾಶ ಇದೆ ಎಂದರು.

ವಿಶೇಷಚೇತನರಿಗೆ ಕೇವಲ ವಾಹನ ನೀಡುವುದಕ್ಕೆ ಆದ್ಯತೆ ನೀಡಬಾರದು. ಅವರ ಬದುಕು ಕಟ್ಟಿಕೊಳ್ಳಲು ಅಗತ್ಯವಾದ ಉಪಕರಣಗಳನ್ನು ನೀಡಬೇಕು. ಮಾರ್ಚ್ ವೇಳೆಗೆ ಅವಧಿ ಮೀರುವ ಅನುದಾನಗಳನ್ನು ಮೊದಲು ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ವೇದಿಕೆಯ ಮೇಲೆ ವಿಶೇಷಚೇತನರ ಇಲಾಖೆ ಮಾಜಿ ರಾಜ್ಯ ಆಯುಕ್ತ ರಾಜಣ್ಣ, ವಿಶೇಷಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣಾಧಿಕಾರಿ ಕೆ. ಪ್ರಕಾಶ್, ಸ್ಫೂರ್ತಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಬಿ. ರೂಪಾನಾಯ್ಕ, ಪಾಲಿಕೆ ಉಪ ಆಯುಕ್ತೆ ನಳಿನ್ ಮತ್ತಿತರರು ಉಪಸ್ಥಿತರಿದ್ದರು.

## ಅಂಧರ ಪುಸ್ತಕದ ಹೊರೆ ಇಳಿಸಿ : ವೀರೇಶ್ ಮನವಿ

ಅಂಧ ವಿದ್ಯಾರ್ಥಿಗಳು ಬ್ರೈಲ್ ಲಿಪಿಯ ಪುಸ್ತಕಗಳನ್ನು ಖರೀದಿಸುವುದು ಹಾಗೂ ಬಳಸುವುದು ಸಮಸ್ಯೆಯಾಗಿದೆ. ಆರ್ಬಿಟ್ ರೀಡರ್ ಎಂಬ ಉಪಕರಣದಲ್ಲಿ ಅಂಧರು ಪುಸ್ತಕಗಳ ಓದುವುದು ಅತ್ಯಂತ ಸುಲಭ. ಇಂತಹ ಉಪಕರಣಗಳನ್ನು ಒದಗಿಸಬೇಕು ಎಂದು ರಾಷ್ಟ್ರೀಯ ದೃಷ್ಟಿ ದೋಷ ಸಂಘದ ಯುವ ಕಾರ್ಯದರ್ಶಿ ವೀರೇಶ್ ಮನವಿ ಮಾಡಿದರು.

ಸಾಮಾನ್ಯವಾಗಿ 300 ಪುಟಗಳಿರುವ ಪುಸ್ತಕಗಳನ್ನು ಬ್ರೈಲ್ ರೂಪದಲ್ಲಿ ಮುದ್ರಿಸಿದಾಗ ಸಂಪುಟಗಳೇ ಆಗುತ್ತವೆ. ದಪ್ಪ ಕಾಗದದಲ್ಲೇ ಮುದ್ರಣ ಮಾಡಬೇಕು. ಇದರಿಂದಾಗಿ ಬ್ರೈಲ್ ಪುಸ್ತಕಗಳು ಅಂಧ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತವೆ. ಇದರ ಬದಲು ಆರ್ಬಿಟ್ ರೀಡರ್ ಉಪಕರಣ ನೀಡಿದರೆ, ಅಧ್ಯಯನಕ್ಕೆ ಅನುಕೂಲವಾಗುತ್ತದೆ ಎಂದರು.

# ಮಾ.9 ರಂದು ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ್ ಅದಾಲತ್

ದಾವಣಗೆರೆ, ಫೆ. 11- ರಾಷ್ಟ್ರೀಯ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳ ನಿರ್ದೇಶನದ ಮೇರೆಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಬರುವ ಮಾರ್ಚ್ 9 ರಂದು ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ್ ಅದಾಲತ್ ತ್ವರಿತಗತಿಯಲ್ಲಿ ಅತಿ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದು ಮೂಲ ಉದ್ದೇಶವಾಗಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲೆಯಲ್ಲಿರುವ ಎಲ್ಲಾ ನ್ಯಾಯಾಲಯಗಳು ತಮ್ಮ ವ್ಯಾಪ್ತಿಯಲ್ಲಿ ಅದಾಲತ್ ಆಯೋಜಿಸಲು ಸೂಚನೆ ನೀಡಿದ್ದು, ಈ ಅದಾಲತ್‌ನಲ್ಲಿ ಚಾಲ್ತಿಯಲ್ಲಿರುವ ಮತ್ತು ವ್ಯಾಜ್ಯಪೂರ್ವ ಪ್ರಕರಣಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಶೀಘ್ರವಾಗಿ ವಿಲೇವಾರಿ ಮಾಡಿಕೊಡಲಾಗುವುದು ಎಂದು ಮಾಹಿತಿ ನೀಡಿದರು.

ರಾಜೀಯಾಗಬಲ್ಲ ಮತ್ತು ಎಲ್ಲಾ ಸಿವಿಲ್, ಕ್ರಿಮಿನಲ್ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂಸ್ವಾಧೀನ ಪರಿಹಾರ ಪ್ರಕರಣಗಳು, ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು, ಎಂಎಂಡಿಆರ್ ಕಾಯ್ದೆ ಅಡಿಯಲ್ಲಿನ ಪ್ರಕರಣಗಳನ್ನು ಲೋಕ್ ಅದಾಲತ್‌ನಲ್ಲಿ ಪರಿಹರಿಸಿಕೊಳ್ಳಬಹುದು ಎಂದು ಹೇಳಿದರು.

ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳು (ವಿಚ್ಛೇದನ ಹೊರತುಪಡಿಸಿ) ಪಿಂಚಣಿ ಪ್ರಕರಣಗಳು ವೇತನ ಭತ್ಯೆ ಸಂಬಂಧಿಸಿದ ಪ್ರಕರಣಗಳು, ವಿದ್ಯುತ್ ಹಾಗೂ ನೀರಿನ ಶುಲ್ಕ, ಕೈಗಾರಿಕೆಗಳ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಇತ್ಯಾದಿ ಪ್ರಕರಣಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು ಎಂದು ಮಾಹಿತಿ ತಿಳಿಸಿದರು.

ರಾಜೀ ಮೂಲಕ ಅನುಕೂಲವಾಗಲಿ ಎಂದು ರಾಜಿ ಪೂರ್ವ ಸಮಾಲೋಚನೆಗಳನ್ನು ಕೂಡ ಆಯೋಜಿಸಲಾಗಿದೆ. ಸಮಾಲೋಚನೆಗಳಲ್ಲಿ ನ್ಯಾಯಾಧೀಶರುಗಳು ಮತ್ತು ನುರಿತ ವಕೀಲರುಗಳು ಭಾಗವಹಿಸಿ ಕಕ್ಷಿಗಾರರಿಗೆ ಮಾಹಿತಿಗಳನ್ನು ಒದಗಿಸುವರು ಎಂದರು.

2023 ರ ಫೆಬ್ರುವರಿ ತಿಂಗಳಿನಿಂದ ಡಿಸೆಂಬರ್ ವರೆಗೆ ಒಟ್ಟು ನಾಲ್ಕು ಆಯೋಜಿಸಲಾಗಿತ್ತು. ಆ ಸಮಯದಲ್ಲಿ ಒಟ್ಟಾಗಿ 15,300 ಜಾರಿಯಲ್ಲಿದ್ದ ಪ್ರಕರಣಗಳು, ಮತ್ತು 493179 ವ್ಯಾಜ್ಯಪೂರ್ವ ಪ್ರಕರಣಗಳು ವಿಲೇವಾರಿಯಾಗಿರುತ್ತವೆ ಎಂದು ತಿಳಿಸಿದರು.

ಸಾರ್ವಜನಿಕರು ರಾಷ್ಟ್ರೀಯ ಲೋಕ್ ಅದಾಲತ್ ನ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕೆಂದು ಕೋರಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (08192-296364), ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ ಹರಿಹರ (08192-296885), ಹೊನ್ನಾಳಿ ಸಮಿತಿ (08188-251732), ಚನ್ನಗಿರಿ (08189-229195), ಜಗಳೂರು (08196-227600) ಇವರನ್ನು ಸಂಪರ್ಕಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್, ಕಾರ್ಯದರ್ಶಿ ಬಸವರಾಜ್ ಮತ್ತಿತರರಿದ್ದರು.



**ಅದಾಲತ್‌ನಲ್ಲಿ ಚಾಲ್ತಿಯಲ್ಲಿರುವ ಮತ್ತು ವ್ಯಾಜ್ಯಪೂರ್ವ ಪ್ರಕರಣಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಶೀಘ್ರವಾಗಿ ವಿಲೇವಾರಿ ಮಾಡಿಕೊಡಲಾಗುವುದು.**

**-ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ,**
ನ್ಯಾಯಾಧೀಶರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.

# 'ಪಂಚಮುಖಿ' ನೆರವಿಗೆ ಶೇ.5ರ ಅನುದಾನ ಬಳಕೆಯಾಗಲಿ

ದಾವಣಗೆರೆ, ಫೆ. 11 - ವಿವಿಧ ಇಲಾಖೆಗಳ ಶೇ.5ರ ಅನುದಾನದ ಹಣವನ್ನು ವಿಶೇಷಚೇತನರಿಗೆ ವಾಹನ ಇತ್ಯಾದಿ ಸಲಕರಣೆಗಳ ವಿತರಣೆಗೆ ಬಳಸಬಾರದು. ಈ ಹಣವನ್ನು ಅವರಿಗೆ 'ಪಂಚಮುಖಿ' ನೆರವು ಒದಗಿಸಲು ಬಳಸಬೇಕು ಎಂದು ವಿಶೇಷಚೇತನರ ಇಲಾಖೆ ಮಾಜಿ ರಾಜ್ಯ ಆಯುಕ್ತ ರಾಜಣ್ಣ ಹೇಳಿದರು.

ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯ್ತಿ ಮತ್ತು ಸ್ಫೂರ್ತಿ ಸಂಸ್ಥೆ, ದಾವಣಗೆರೆ ಇವುಗಳ ಸಂಯುಕ್ತಾಶ್ರಯದಲ್ಲಿ ಪಾಲಿಕೆ ಹಾಗೂ ವಿವಿಧ ಇಲಾಖೆಗಳ ಶೇ.5ರ ಅನುದಾನದಡಿಯಲ್ಲಿ ವಿಶೇಷ ಚೇತನರ ಕಲ್ಯಾಣ ನಿಧಿಯ ಕ್ರಿಯಾ ಯೋಜನೆ ಹಾಗೂ ಅಡೆ - ತಡೆ ರಹಿತ ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ವಿಶೇಷಚೇತನರನ್ನು ವೈದ್ಯಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗೂ ಬಲವರ್ಧನೆ ಎಂಬ ಐದು ಅಂಶಗಳ ಮೂಲಕ ಸಶಕ್ತರಾಗಿರಬೇಕಿದೆ. ಇದಕ್ಕಾಗಿ ಶೇ.5ರ ಅನುದಾನ ಬಳಕೆಯಾಗಬೇಕು ಎಂದರು.

ಸಂಸದರು ಹಾಗೂ ಶಾಸಕರ ಅನುದಾನದಲ್ಲಿ ವರ್ಷಕ್ಕೆ 48 ಕೋಟಿ ರೂ.ಗಳು ವಿಶೇಷಚೇತನರಿಗೆ ಲಭ್ಯವಿದೆ. ಈ ಹಣವನ್ನು ಸಾಧನ ಸಲಕರಣೆಗಳ ವಿತರಣೆಗೆ ಬಳಸಬೇಕು ಎಂದವರು ಅಧಿಕಾರಿಗಳಿಗೆ ತಿಳಿಸಿದರು.

ವಿಶೇಷಚೇತನರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕಾದರೆ ಸಂಘಟಿತರಾಗುವುದು ಅನಿವಾರ್ಯ. ಸಂಘಟಿತರಾದಲ್ಲಿ ಮಾತ್ರ ತಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ಮನದಟ್ಟು ಮಾಡಲು ಸಾಧ್ಯ ಎಂದು ರಾಜಣ್ಣ ಹೇಳಿದರು.

ವಿಶೇಷಚೇತನರ ಆರೈಕೆ ಮಾಡುವವರಲ್ಲಿ ಶೇ.92ರಷ್ಟು ಮಹಿಳೆಯರೇ ಆಗಿದ್ದಾರೆ. ಇವರು ಜಿಲ್ಲಾ ಕೇಂದ್ರಗಳಿಗೆ ಬರಲು ತಾತ್ಕಾಲಿಕ ಬಸ್ ಪಾಸ್ ಕೊಡಬೇಕು ಎಂಬ ಬೇಡಿಕೆ ಸಾಕಷ್ಟು ವರ್ಷಗಳಿಂದ ಬಾಕಿ ಇದೆ. ಕೇವಲ 2.5-3 ಲಕ್ಷದಷ್ಟಿದ್ದ ಇವರಿಗೆ ಉಚಿತ ಬಸ್ ಪಾಸ್ ಸಿಕ್ಕಿರಲಿಲ್ಲ. ಆದರೆ, ಸರ್ಕಾರ ಈಗ ರಾಜ್ಯದ 3 ಕೋಟಿಗೂ ಹೆಚ್ಚು ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯ ಒದಗಿಸಿದೆ. ಸಂಘಟಿತರಾಗಿ ಬೇಡಿಕೆ ಮನದಟ್ಟು ಮಾಡಿಕೊಡಬೇಕು ಎಂಬುದಕ್ಕೆ ಇದೇ ಉದಾಹರಣೆ ಎಂದವರು ತಿಳಿಸಿದರು.

ಈ ಹಿಂದೆ ವಿಶೇಷಚೇತನರಿಗಾಗಿ ರಾಜ್ಯ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಲಾಗುತ್ತಿತ್ತು. ಈಗ ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಯೋಜನೆ ರೂಪಿಸಲು ಅಧಿಕಾರ ನೀಡಲಾಗಿದೆ ಎಂದೂ ಅವರು ಹೇಳಿದರು.



## ಮಕ್ಕಳಿಗೆ ಸಂಸ್ಕಾರ ಕಲಿಸುವುದು ಮುಖ್ಯ : ತ್ಯಾವಣಿಗಿ ವೀರಭದ್ರಸ್ವಾಮಿ

**ಹರಿಹರ**

ಹರಿಹರ, ಫೆ. 11- ಸಾಮಾನ್ಯವಾಗಿ ಶಾಲೆಗಳಲ್ಲಿ ಶಿಕ್ಷಣವನ್ನು ಮಾತ್ರ ಕೊಡಲಾಗುತ್ತದೆ. ಪೋಷಕರೂ ಸಹ ಅಂಕ ಗಳಿಕೆಯ ಕಡೆಗೆ ಗಮನಹರಿಸುತ್ತಾರೆ. ಆದರೆ, ಶಿಕ್ಷಣಕ್ಕೆ ಕೊಟ್ಟ ಪ್ರಾಮುಖ್ಯತೆಯನ್ನು ಸಂಸ್ಕಾರಯುತ ಗುಣಗಳನ್ನು ಮಕ್ಕಳಿಗೆ ಕಲಿಸುವುದೂ ಬಹಳ ಮುಖ್ಯ ಎಂದು ಸಂಸ್ಥೆಯ ಕಾರ್ಯದರ್ಶಿ ತ್ಯಾವಣಿಗಿ ವೀರಭದ್ರಸ್ವಾಮಿ ಹೇಳಿದರು.

ಶಾರದಾ ವಿದ್ಯಾಲಯದ 18ನೇ ವರ್ಷದ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವೇದಿಕೆಯ ಮೇಲೆ ಉಪಸ್ಥಿತರಿದ್ದ ಮಲ್ಲೇಶ್ ಶ್ಯಾಗಲೆ ಮಾತನಾಡಿ, ಇಂದಿನ ಕಾಲದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಕಷ್ಟ ಸಾಧ್ಯ ಎಂದು ತಿಳಿಸಿದರು.

ವೇದಿಕೆಯಲ್ಲಿ ಎ.ಸಿ.ಎಂ. ಶಾಲೆಯ ಸಂಸ್ಥಾಪಕ ಮಂಜುನಾಥಸ್ವಾಮಿ ಹಾಗೂ ಸಂಸ್ಥೆಯ ಶ್ರೀಮತಿ ನಯನ ವಿ. ಸ್ವಾಮಿ ಉಪಸ್ಥಿತರಿದ್ದರು.

ಶಿಕ್ಷಕಿ ರೂಪ ಸ್ವಾಗತಿಸಿದರು. ಮುಖ್ಯ ಶಿಕ್ಷಕಿ ಮಂಜುಳ ವಂದಿಸಿದರು. ಶಿಕ್ಷಕಿ ಕವಿ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ನಯೀಮಾ ಹಾಗೂ ಶಿಕ್ಷಕಿ ಆಸ್ಮಾಬಾನು ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

## ಆನ್‌ಲೈನ್‌ನಲ್ಲಿ ಇಂದು ಶರಣ ಚಿಂತನ ಗೋಷ್ಠಿ

ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ- ಸಂಚಿಕೆ 1 ಕಾರ್ಯ ಕ್ರಮವನ್ನು ಇಂದು ಸಂಜೆ 7 ರಿಂದ 8.30ರವರೆಗೆ ಏರ್ಪಡಿಸಲಾಗಿದೆ.

https://meet.google.com/ryi-mxfg-bmi ಲಿಂಕ್ ಉಪಯೋಗಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದಾಗಿದೆ.

ಡಾ. ಎಂ.ಜಿ. ಈಶ್ವರಪ್ಪ ಆಶಯ ನುಡಿಗಳನ್ನಾಡಲಿದ್ದಾರೆ. ಕೆ.ಬಿ. ಪರಮೇಶ್ವರಪ್ಪ ಅಧ್ಯಕ್ಷರ ನುಡಿಗಳನ್ನಾಡಲಿದ್ದಾರೆ. ಅಕ್ಕನ ವಚನಗಳಲ್ಲಿ ಕದಳಿಯ ಪರಿಕಲ್ಪನೆ ವಿಷಯ ಕುರಿತು ಡಾ. ಉಷಾದೇವಿ ಹಿರೇಮಠ ಅನುಭಾವದ ನುಡಿಗಳನ್ನಾಡಲಿದ್ದಾರೆ. ಅತಿಥಿಗಳಾಗಿ ಗಾಯತ್ರಿ ವಸ್ತ್ರದ್ ಉಪಸ್ಥಿತರಿರುವರು.

# ಅಯೋಧ್ಯೆಯಲ್ಲೊಂದು ಹಣದ ವ್ಯವಹಾರ ನಡೆಸದ ವಿಶಿಷ್ಟ ಬ್ಯಾಂಕ್

ಅಯೋಧ್ಯೆ, ಫೆ. 11 - ಅಯೋಧ್ಯೆಯಲ್ಲಿ ವಿಶಿಷ್ಟ ಬ್ಯಾಂಕ್ ಒಂದು ಇದ್ದು, ಇಲ್ಲಿ ಹಣದ ವ್ಯವಹಾರ ನಡೆಯುವು ದಿಲ್ಲ. 35 ಸಾವಿರ ಖಾತೆದಾರರು ಮನಸ್ಸಿನ ಶಾಂತಿ, ನಂಬಿಕೆ ಹಾಗೂ ಅಧ್ಯಾತ್ಮವನ್ನು ಮಾತ್ರ ವ್ಯವಹರಿಸುತ್ತಿದ್ದಾರೆ!

ನೂತನ ರಾಮ ಮಂದಿರ ನಿರ್ಮಾಣವಾದ ನಂತರ ಅಯೋಧ್ಯೆಗೆ ಭೇಟಿ ನೀಡುವ ಭಕ್ತರು ಹಾಗೂ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಇಲ್ಲಿನ ಅಂತರ ರಾಷ್ಟ್ರೀಯ ಶ್ರೀ ಸೀತಾರಾಮ್ ಬ್ಯಾಂಕ್ ಸಹ ಹೆಸರಾಗುತ್ತಿದೆ. ಇಲ್ಲಿ 'ಸೀತಾರಾಮ' ಎಂಬ ಜಪ ಬರೆದಿರುವ ಕಿರುಹೊತ್ತಿಗೆಗಳನ್ನು ಜಮಾ ಮಾಡಿಕೊಳ್ಳಲಾಗುತ್ತದೆ.

1970ರಲ್ಲಿ ಮಹಾಂತ ನೃತ್ಯ ಗೋಪಾಲದಾಸ್ ಅವರು ಈ ಅಧ್ಯಾತ್ಮಿಕ ಬ್ಯಾಂಕ್ ಸ್ಥಾಪಿಸಿದ್ದರು. ಅವರು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಅಧ್ಯಕ್ಷರೂ ಆಗಿದ್ದಾರೆ. ಇಲ್ಲಿ ದೇಶ ವಿದೇಶಗಳ 35 ಸಾವಿರ ಖಾತೆದಾರರಿದ್ದಾರೆ.

ರಾಮಮಂದಿರ ಪ್ರಾಣ ಪ್ರತಿಷ್ಠಾಪನೆಯ ನಂತರ ಬ್ಯಾಂಕ್‌ಗೆ ಬರುವವರ ಸಂಖ್ಯೆ ಹೆಚ್ಚಾಗಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ಪುನೀತ್ ರಾಮ್ ದಾಸ್ ಮಹಾರಾಜ್ ತಿಳಿಸಿದ್ದಾರೆ. ಇಲ್ಲಿಗೆ ಬರುವ ಭಕ್ತರಿಗೆ ಉಚಿತ ಕಿರುಹೊತ್ತಿಗೆ ಹಾಗೂ ಕೆಂಪು ಪೆನ್ನುಗಳನ್ನು ನೀಡಲಾಗುತ್ತದೆ. ಕನಿಷ್ಠ 5 ಲಕ್ಷ ಬಾರಿ ಸೀತಾರಾಮ್ ಬರೆದವರು ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ಸಾಧ್ಯ. ಅವರಿಗೆ ಪಾಸ್‌ಬುಕ್ ನೀಡಲಾಗುತ್ತದೆ ಎಂದವರು ವಿವರಿಸಿದ್ದಾರೆ. ನಾಮಜಪ ಬರೆಯುವುದು ಹಾಗೂ ಇದನ್ನು ಬ್ಯಾಂಕ್‌ನಲ್ಲಿ ಠೇವಣಿ ಇರಿಸುವುದೂ ಸಹ ಪ್ರಾರ್ಥನೆಯಂತೆ. ರಾಮ ಜಪದಿಂದ ಭಕ್ತರಿಗೆ ನೆಮ್ಮದಿ ಹಾಗೂ ಅಧ್ಯಾತ್ಮಿಕ ಶ್ರೀಮಂತಿಕೆ ಸಿಗುತ್ತದೆ ಎಂದವರು ತಿಳಿಸಿದ್ದಾರೆ.

ನಾಮಜಪ ಬರೆಯುವುದೂ ಸಹ ಒಂದು ರೀತಿಯ ಪೂಜೆ ಸಲ್ಲಿಸುವಿಕೆಯಂತೆ. ಜೀವನದಲ್ಲಿ ಸಮಸ್ಯೆ ಎದುರಾದಾಗಲೆಲ್ಲಾ ದೇವರ ನಾಮ ಬರೆಯುತ್ತೇನೆ. ಅಂಚೆ ಮೂಲಕವೂ ಕಿರುಹೊತ್ತಿಗೆ ಕಳಿಸಬಹುದು. ಆದರೆ, ನಾನು ನೇರವಾಗಿ ಪುಸ್ತಕ ಸಲ್ಲಿಸುತ್ತೇನೆ ಎಂದು ಬಿಹಾರದ ಗಯಾದ ಜೀತು ನಗರ್ ತಿಳಿಸಿದ್ದಾರೆ.

# ಕ್ರಿಕೆಟ್ ಆಟಗಾರರ ನೆಚ್ಚಿನ ಗುರುವಾಗಿದ್ದ ಸಿ.ಕೆ.ಮೂರ್ತಿ

## ನಗರದಲ್ಲಿ ಟಿ-20 ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿದ ದಿನೇಶ್ ಕೆ. ಶೆಟ್ಟಿ ಸ್ಮರಣೆ



ದಾವಣಗೆರೆ,ಫೆ.11- ನಗರದಲ್ಲಿ ಕ್ರಿಕೆಟ್ ಬೀಜವನ್ನು ಬಿತ್ತಿ, ನೂರಾರು ಕ್ರೀಡಾಪಟುಗಳ ಪಾಲಿನ ನೆಚ್ಚಿನ ಗುರು ಆಗಿದ್ದ ದಿ. ಸಿ.ಕೆ.ಮೂರ್ತಿ ಸ್ಮರಣಾರ್ಥ ಪ್ರತಿ ವರ್ಷ ರಾಜ್ಯಮಟ್ಟದ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸುವ ಉದ್ದೇಶವಿದೆ ಎಂದು ದಾವಣಗೆರೆ ಕ್ರಿಕೆಟ್ ಕ್ಲಬ್ ಕಾರ್ಯದರ್ಶಿಯೂ ಆದ ಹಿರಿಯ ಕ್ರಿಕೆಟ್ ಪಟು ದಿನೇಶ ಕೆ.ಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಡಿಸಿಸಿ ವತಿಯಿಂದ ದಿ. ಸಿ.ಕೆ.ಮೂರ್ತಿ ಸ್ಮರಣಾರ್ಥ ಮೊಟ್ಟ ಮೊದಲ ಬಾರಿಗೆ ಬಿಳಿ ಬಣ್ಣದ ಚೆಂಡಿನ ಟಿ-20 ಕ್ರಿಕೆಟ್ ಪಂದ್ಯಾವಳಿಗೆ ಹಿರಿಯ ಕ್ರೀಡಾಪಟು, ಹೃದ್ರೋಗ ತಜ್ಞ ಡಾ.ಪ್ರಕಾಶ ಹಿರೇಮಠ್ ಜೊತೆಗೆ ಬ್ಯಾಟಿಂಗ್ ಮಾಡುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರಿಕೆಟ್ ಅಂದರೆ ಸಿ.ಕೆ.ಮೂರ್ತಿ, ಸಿ.ಕೆ.ಮೂರ್ತಿ ಅಂದರೆ ಕ್ರಿಕೆಟ್ ಎಂಬುಷ್ಟರ ಮಟ್ಟಿಗೆ ಜನರ ಮನಸ್ಸಿನಲ್ಲಿ ಮೂರ್ತಿ ಆವರಿಸಿದ್ದಾರೆ ಎಂದರು.

ಹಿರಿಯ ಕ್ರೀಡಾಪಟು ಸಿ.ಜಿ.ಶ್ರೀಪತಿ ಮಾತನಾಡಿ, 1956ರಲ್ಲಿ ಡಿಸಿಸಿ ಹುಟ್ಟು ಹಾಕಿದಾಗ, ಬ್ಯಾಟ್ ಹಿಡಿಯೋರು ಇರಲಿ, ಕ್ರೀಡಾಂಗಣದಲ್ಲಿ ಸಹ ಯಾರೂ ಇರಲಿಲ್ಲ. ಅಂತಹ ಕಾಲಘಟ್ಟದಲ್ಲಿ ತಮ್ಮ ಸಹೋದರ ಸಿ. ಕೆ.ಮೂರ್ತಿ ಇಲ್ಲಿ ಕ್ರಿಕೆಟ್ ಓಂಕಾರ ಬರೆದರು. ಗುರು ಬಳಿ ಕ್ರಿಕೆಟ್ ಕಲಿತವರು ಇಂದು ಎಲ್ಲೆಡೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ್ರಿಕೆಟ್ ನಿಂದಲೇ ಭವಿಷ್ಯ ಕಟ್ಟಿಕೊಂಡಿದ್ದಾರೆ ಎಂದರು.

ಹಿರಿಯ ಕ್ರೀಡಾಪಟು ಡಿ.ಎ.ರಾಜಶೇಖರ್ ಮಾತನಾಡಿ, ಟೆನ್ನಿಸ್ ಬಾಲ್ ಹಾವಳಿಯ ಮಧ್ಯೆ ಲೆದರ್ ಬಾಲ್ ಕ್ರಿಕೆಟ್ ತಮ್ಮನ್ನ ವೈಭವ ಕಳೆದುಕೊಳ್ಳುತ್ತಿದೆ ಎಂದು ವ್ಯಾಕುಲತೆ ವ್ಯಕ್ತಪಡಿಸಿದರು.

ಡಿಸಿಸಿ ಕ್ರೀಡಾಪಟು, ಪತ್ರಕರ್ತ ನಾಗರಾಜ ಎಸ್.ಬಡದಾಳ್ ಮಾತನಾಡಿ, ಸಿ.ಕೆ.ಮೂರ್ತಿ ಹೆಸರನ್ನು ಪೆವಿಲಿಯನ್ ರಸ್ತೆ ಅಥವಾ ಹರ್ಷ ಬಾರ್ ಬಳಿಯಿಂದ ಡೆಂಟಲ್ ಕಾಲೇಜು ರಸ್ತೆಗೆ ಸಾಗುವ ಮಾರ್ಗಕ್ಕೆ ಇಡಲು ಒತ್ತಾಯಿಸೋಣ ಎಂದು ತಿಳಿಸಿದರು.

ಹಿರಿಯ ಕ್ರೀಡಾಪಟುಗಳಾದ ನಿವೃತ್ತ ಹೃದ್ರೋಗ ತಜ್ಞ ಡಾ.ಪ್ರಕಾಶ ಹಿರೇಮಠ್, ಬಾಲಕೃಷ್ಣ ಬಾಲು, ಬಿಸಿಎಚ್‌ಐ ಮಂಜುನಾಥ ರೊಳ್ಳಿ, ಹರಿಹರದ ಅಜಿತ್ ಸಾವಂತ್, ದಾವಿವಿ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಡಾ.ರಾಜ ಕುಮಾರ, ಜೆಜೆಎಂ ವೈದ್ಯಕೀಯ ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಗೋಪಾಲ ಕೃಷ್ಣ, ಎಂ.ಆರ್.ಮಾಲತೇಶ, ಅಬಿದ್ ಅಲಿ, ತುಮಕೂರು ವಲಯದ ಆಯ್ಕೆ ಸಮಿತಿಯ ಎಲ್.ಎಂ.ಪ್ರಕಾಶ, ಗೋಪಾಲ ಕೃಷ್ಣ, ಕೋಚ್ ತಿಮ್ಮೇಶ್, ಜಿಲ್ಲಾ ಪೊಲೀಸ್ ಇಲಾಖೆ ಎಎಸ್‌ಐ ನಾಗೇಶ್ ಗೌಡ, ಸಿ.ಜಿ.ಗುಂಡಣ್ಣ, ಜಿಪಂ ನಾಗೇಶ, ಅನಿಲ್, ಪ್ರಭುಗೌಡ ಮುಂಡರಗಿ, ಅನಿಲ್, ವಿಕಾಸ್ ಸದಾಶಿವ, ತೇಜು, ನವೀನ್, ಅಂಕುಶ್, ಗುರುರಾಜ ಉಪಾಧ್ಯಾಯ ಇತರರು ಇದ್ದರು.



# ಹಕ್ಕುಪತ್ರ ವಿತರಿಸುವಂತೆ ಮಲೇಬೆನ್ನೂರು, ಕೊಮಾರನಹಳ್ಳಿ, ಕೊಪ್ಪ ರೈತರ ಆಗ್ರಹ



ಮಲೇಬೆನ್ನೂರು, ಫೆ.11- ಬಗರ್‌ಹುಕುಂ ಹಕ್ಕುಪತ್ರ ವಿತರಣೆ ವಿಷಯದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಆಶಯಕ್ಕೆ ದಕ್ಕೆಯಾಗುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಮಲೇಬೆನ್ನೂರು ಘಟಕ ದೂರಿದೆ.

ಭಾನುವಾರ ಮಲೇಬೆನ್ನೂರಿನ ನೀರಾವರಿ ಇಲಾಖೆ ಆವರಣದಲ್ಲಿ ಸಭೆ ಸೇರಿದ್ದ ನೂರಾರು ರೈತರು ಕಳೆದ 30 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಇದುವರೆಗೂ ಹಕ್ಕು ಪತ್ರ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೊಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 44ರಲ್ಲಿ ಸರ್ಕಾರಿ ಗೋಮಾಳ ಜಮೀನಿನಲ್ಲಿ 34 ಎಕರೆ 25 ಗುಂಟೆ ಮತ್ತು ಸರ್ವೇ ನಂಬರ್ 59ರಲ್ಲಿ ಸರ್ಕಾರಿ ಗುಡ್ಡ 74 ಎಕರೆ 33 ಗುಂಟೆ ಹಾಗೂ ಸರ್ವೇ ನಂಬರ್ 61ರಲ್ಲಿ 142 ಎಕರೆ 37 ಗುಂಟೆ ಮತ್ತು ಕೊಪ್ಪ ಸರ್ವೇ ನಂ 30ರಲ್ಲಿ 281 ಎಕರೆ 21 ಗುಂಟೆ ಜಮೀನು ಸರ್ಕಾರಿ ದಾಖಲೆಯಲ್ಲಿದೆ. ಆದರೆ, ಈ ಜಮೀನುಗಳನ್ನು ಹಲವಾರು ವರ್ಷಗಳಿಂದ ರೈತರು ಹುಳುಮೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಆದ್ದರಿಂದ ಸರ್ಕಾರ ಅಥವಾ ಜಿಲ್ಲಾಡಳಿತ ಕೂಡಲೇ ಈ ರೈತರಿಗೆ ಹಕ್ಕು ಪತ್ರ ವಿತರಿಸಲು ಕ್ರಮ ಕೈಗೊಳ್ಳಬೇಕೆಂಬ ಮನವಿ ಪತ್ರವನ್ನು ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಬಿ.ಪಿ.ಹರೀಶ್ ಅವರಿಗೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕ ಹರೀಶ್ ಅವರು, ಬಗರ್ ಹುಕುಂನಲ್ಲಿ ಉಳುಮೆ ಮಾಡು ತ್ತಿರುವ ರೈತರಿಗೆ ಕಾನೂನಿನ ಚೌಕಟ್ಟಿನೊಳಗೆ ಹಕ್ಕುಪತ್ರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ರೈತರ ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್, ಹರಿಹರ ತಾಲ್ಲೂಕು ಅಧ್ಯಕ್ಷ ಕೋಗಳಿ ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ಹಾಗೂ ವಕೀಲ ಕೊಮಾರನಹಳ್ಳಿ ಮಂಜುನಾಥ್, ಬೆಳಕೆರೆ ಬಸಣ್ಣ, ಅಶೋಕ್, ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ರಾಜ್ಯಸಭೆಗೆ ಬಿಜೆಪಿ 14 ಅಭ್ಯರ್ಥಿಗಳ ಹೆಸರು ಪ್ರಕಟ

ನವದೆಹಲಿ, ಫೆ. 11 – ರಾಜ್ಯಸಭಾ ಚುನಾವಣೆಗಾಗಿ ಬಿಜೆಪಿ 14 ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸಿದೆ. ಕೇಂದ್ರ ಸಚಿವ ಆರ್.ಪಿ.ಎನ್. ಸಿಂಗ್ ಹಾಗೂ ಸುಧಾಂಶು ತ್ರಿವೇದಿ ಅವರು ಮರು ಆಯ್ಕೆಯ ಅವಕಾಶ ಪಡೆದಿದ್ದಾರೆ.

ಕರ್ನಾಟಕ ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಕೈ ಬಿಡಲಾಗಿದೆ. ಅವರ ಬದಲು ಮಾಜಿ ಪರಿಷತ್ ಸದಸ್ಯ ನಾರಾಯಣಸಾ ಕೆ. ಭಾಂಡಗೆ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಭಾಂಡಗೆ ಹಾಗೂ ಛತ್ತೀಸ್‌ಘಡದ ದೇವೇಂದ್ರ ಪ್ರತಾಪ್ ಸಿಂಗ್ ಅವರು ಸಂಘಟನೆಗಾಗಿ ಶ್ರಮಿಸಿದ್ದನ್ನು ಗುರುತಿಸಿ ಅವಕಾಶ ನೀಡಲಾಗಿದೆ. ಹಲವು ಸಚಿವರು ರಾಜ್ಯಸಭೆಗೆ ಮರು ಆಯ್ಕೆ ಅವಕಾಶ ಪಡೆದಿಲ್ಲ. ಇವರಲ್ಲಿ ಕೆಲವರು ಲೋಕಸಭೆಗೆ ಸ್ಪರ್ಧಿಸುವ ಸಾಧ್ಯತೆ ಇದೆ. ಗುಜರಾತ್, ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರಗಳ ಹಲವು ಟಿಕೆಟ್‌ಗಳ ಘೋಷಣೆ ಇನ್ನೂ ಬಾಕಿ ಇದೆ.

ಫೆಬ್ರವರಿ 27ರಂದು 15 ರಾಜ್ಯಗಳ 56 ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಕೆಗೆ ಫೆಬ್ರವರಿ 15 ಕೊನೆ ದಿನವಾಗಿದೆ.

# ಶಶಿಕುಮಾರ್ ಅವರಿಗೆ ಇಂದು ವರ್ಷದ ವ್ಯಕ್ತಿ ಪುರಸ್ಕಾರ



'ತಪೋವನ' ಹೆಸರನ್ನು ನಾಡಿನ ಉದ್ದಗಲಕ್ಕೂ ಪಸರಿಸುವಂತೆ ಮಾಡಿ, ದೇಶದ ಅನೇಕ ರಾಜ್ಯಗಳಿಂದಲೂ ವಿದ್ಯಾರ್ಥಿ ಸಮೂಹವನ್ನು ಸೆಳೆಯುವಲ್ಲಿ ಯಶಸ್ವಿಯಾಗಿರುವ ಯುವೋತ್ಸಾಹಿಯೇ ಡಾ. ವಿ.ಎಂ. ಶಶಿಕುಮಾರ್.

ಹುಟ್ಟಿದ್ದು 1969ರ ಜುಲೈ 5 ಹರಿಹರದ ದಿ.ವಾಸುದೇವಸಾ ಮೆಹರ್ವಾಡೆ ಮತ್ತು ಶ್ರೀಮತಿ ಲಕ್ಷ್ಮೀಬಾಯಿ ದಂಪತಿಯ ಮಗ ಶಶಿಕುಮಾರ್. ಹುಟ್ಟಿದೂರಿನಲ್ಲಿ ಕಾಲೇಜು ಶಿಕ್ಷಣ ಪಡೆದ ಇವರು, ದೂರದ ಇಂಗ್ಲೆಂಡಿನ ಡರ್ ಹ್ಯಾಮ್ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ. ಶಿಕ್ಷಣ ಪಡೆದಿದ್ದಾರೆ.

ಹೆತ್ತವರು ರೂಢಿಯಾಗಿಸಿಕೊಂಡಿದ್ದ ಆಯುರ್ವೇದ ವೈದ್ಯ ಪದ್ಧತಿಯತ್ತ ಆಕರ್ಷಿತರಾಗಿ ದೇಶೀಯ ವೈದ್ಯ ಪದ್ಧತಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕೆಂಬ ಹಿನ್ನೆಲೆಯಲ್ಲಿ 'ಶ್ರೀ ಶಕ್ತಿ ಅಸೋಸಿಯೇಷನ್' ಸಂಸ್ಥೆಗೆ ಬೀಜಾಂಕುರ ಮಾಡುತ್ತಾರೆ. ಮಾನವ ಸಂಪನ್ಮೂಲ ಸಚಿವಾಲಯ ಭಾರತದ ಸಹಕಾರದೊಂದಿಗೆ ತಮ್ಮ ಸಂಸ್ಥೆಯ ಮೂಲಕ ಅನೇಕ ರಚನಾತ್ಮಕ ಕಾರ್ಯಚಟುವಟಿಕೆಗಳಿಗೆ ಚಾಲನೆ ನೀಡುತ್ತಾರೆ.

ರಾಜ್ಯದ ಆಯ್ದ ಏಳು ಜಿಲ್ಲೆಗಳಲ್ಲಿ ಅನೇಕ ಜನಪರ ಕಾರ್ಯಗಳನ್ನು ಅನುಷ್ಠಾನಗೊಳಿಸಿದ್ದಾರೆ. ಪ್ರತಿ ವರ್ಷವೂ 10 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಡುವುದರ ಮೂಲಕ ಪರಿಸರ ಕಾಳಜಿಗೆ ತಮ್ಮ ವಿಶಿಷ್ಟ ಕೊಡುಗೆಯನ್ನು ನೀಡಿರುವುದು ಹೆಮ್ಮೆಯ ಸಂಗತಿ. ಆಯ್ದ ಜಿಲ್ಲೆಗಳಲ್ಲಿ ಆಸ್ಪತ್ರೆ, ವೃದ್ಧಾಶ್ರಮ, ಶಾಲೆಗಳನ್ನು ತೆರೆಯುವ ಮೂಲಕ ಸಾಮಾಜಿಕ ಸೇವಾಕಾರ್ಯಕ್ಕೆ ಒತ್ತು ನೀಡಿದ್ದಾರೆ. ಇವರ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿ 'ತಪೋವನ' ಸಂಸ್ಥೆಯು ಸ್ಥಾಪನೆಯಾಗಿ ಯಶಸ್ಸಿನ ಹಾದಿಯಲ್ಲಿ ಮುನ್ನಡೆದಿದೆ. ಭಾರತೀಯ ವೈದ್ಯ ಪರಂಪರೆಗೆ ಒತ್ತುಕೊಡುವ ಉದ್ದೇಶದ ಹಿನ್ನೆಲೆಯಲ್ಲಿ ಆಯುರ್ವೇದ ಯೋಗ ಹಾಗೂ ಪ್ರಕೃತಿ ಚಿಕಿತ್ಸೆಯನ್ನು ಅಳವಡಿಸಿಕೊಂಡಿರುವುದು ತಪೋವನದ ವೈಶಿಷ್ಟ್ಯವಾಗಿದೆ.

ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಇವರಿಗೆ 2022ರಲ್ಲಿ ದಾವಣಗೆರೆ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಪುರಸ್ಕರಿಸಿದೆ.

ಶಶಿಕುಮಾರ್ ಮೆಹರ್ವಾಡೆ ಅವರನ್ನು '2023 ರ ವರ್ಷದ ವ್ಯಕ್ತಿ' ಪುರಸ್ಕಾರಕ್ಕೆ 'ಜಿಲ್ಲೆ ಸಮಾಚಾರ' ಪತ್ರಿಕಾ ಬಳಗವು ಆಯ್ಕೆಯ ನಿರ್ಧಾರ ಕೈಗೊಂಡಿದೆ.

**ಪ್ರಶಸ್ತಿ ಪ್ರದಾನ :** ಜಿಲ್ಲೆ ಸಮಾಚಾರ ಪತ್ರಿಕಾ ಬಳಗದ ವತಿಯಿಂದ 2023 ನೇ ಸಾಲಿನ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ ಸಮಾರಂಭವು ಇಂದು ಸಂಜೆ 5.30 ಕ್ಕೆ ಶಿವಯೋಗ ಮಂದಿರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಸಂಚಾಲಕ ಸಾಲಿಗ್ರಾಮ ಗಣೇಶ ಶೆಣೈ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ದೊಡ್ಡಬಾತಿ ತಪೋವನ ಸಮೂಹ ಸಂಸ್ಥೆಗಳ ಸಂಸ್ಥಾಪಕ ಡಾ. ವಿ.ಎಂ. ಶಶಿಕುಮಾರ್ ಅವರಿಗೆ 'ವರ್ಷದ ವ್ಯಕ್ತಿ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವಿಶ್ರಾಂತ ಲೋಕಾಯುಕ್ತ ಸಂತೋಷ್ ಹೆಗ್ಡೆ ಪ್ರಶಸ್ತಿ ಪ್ರದಾನ ಮಾಡಲಿದ್ದು, ಶ್ರೀ ಬಸವ ಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮೈಸೂರಿನ ಹಿರಿಯ ಸಾಹಿತಿ ಪ್ರೊ. ಹರಿಶಂಕರ್ ಆಶಯ ನುಡಿಗಳನ್ನಾಡಲಿದ್ದು, ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಕಾರ್ಯಕ್ರಮವನ್ನು ಉದ್ಘಾಟಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಪತ್ರಿಕಾ ಬಳಗದ ಸಂಸ್ಥಾಪಕ ವಿ. ಹನುಮಂತಪ್ಪ, ಪದಾಧಿಕಾರಿಗಳಾದ ಸತ್ಯಭಾಮ ಮಂಜುನಾಥ್, ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್, ಮಹಾಂತೇಶ್ ವಿ. ಒಣರೊಟ್ಟಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

## ಕನ್ನಡದಲ್ಲೂ ಸಶಸ್ತ್ರ ಪಡೆಗಳ ಪೇದೆ ನೇಮಕಾತಿ ಪರೀಕ್ಷೆ

ನವದೆಹಲಿ, ಫೆ. 11 – ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಪೇದೆ (ಜಿ.ಡಿ.) ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಕನ್ನಡದಲ್ಲೂ ಬರೆಯಲು ಕೇಂದ್ರ ಸರ್ಕಾರ ಅವಕಾಶ ನೀಡಿದೆ. ಇದುವರೆಗೂ ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ಇತ್ತು. ಮುಂದಿನ ಫೆಬ್ರವರಿ 20ರಿಂದ ಮಾರ್ಚ್ 7ರ ನಡುವೆ 128 ನಗರಗಳಲ್ಲಿ ನೇಮಕಾತಿ ಪರೀಕ್ಷೆಗಳು ನಡೆಯಲಿವೆ. ಈ ಬಾರಿ ಕನ್ನಡ ಸೇರಿದಂತೆ 13 ಪ್ರಾಂತೀಯ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ.

## ಎಲೆಬೇತೂರಿನಲ್ಲಿ ದೇವಸ್ಥಾನದ ಉದ್ಘಾಟನೆ, ಪ್ರತಿಷ್ಠಾಪನೆ ಇಂದು



ದಾವಣಗೆರೆ ಸಮೀಪದ ಎಲೆಬೇತೂರು ಗ್ರಾಮ ದಲ್ಲಿ ಶ್ರೀ ಮಾರಿಕಾಂಬಾ ದೇವಿ ದೇವಸ್ಥಾನದ ಉದ್ಘಾಟನೆ ಹಾಗೂ ದೇವಿಯ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಇಂದು ಮತ್ತು ನಾಳೆ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ ಶ್ರೀ ಮಾರಿಕಾಂಬಾ ದೇವಿಯನ್ನು ಮೆರವಣಿಗೆ ಮೂಲಕ ಬಾಜಾ ಭಜಂತ್ರಿಯೊಂದಿಗೆ ದೇವಸ್ಥಾನಕ್ಕೆ ಕರೆತರಲಾಗುವುದು. ಸಂಜೆ 6 ಗಂಟೆಗೆ ದೇವತೆಗೆ ಅದಿವಾಸ ಪೂಜೆ ಹಾಗೂ ವಾಸ್ತು ಮತ್ತು ದೇವತಾ ಪ್ರತಿಷ್ಠಾಂಗ ಹೋಮ ಜರುಗುವುದು. ನಾಳೆ ಮಂಗಳವಾರ ಬೆಳಿಗ್ಗೆ ದೇವಸ್ಥಾನ ಉದ್ಘಾ ಟನೆ, ದೇವಿಯ ಪ್ರತಿಷ್ಠಾಪನೆ ನಂತರ ಮಹಾಮಂಗಳಾರತಿ, ಕಳಸಾರೋಹಣ ಕಾರ್ಯಕ್ರಮ ಜರುಗುವುದು. ನಂತರ ಪ್ರಸಾದ ವಿತರಣೆ ನಡೆಯಲಿದೆ.

## ನಗರದಲ್ಲಿ ಇಂದು ಸಂಸದರ ಕಚೇರಿ ಎದುರು ಸಿಪಿಐ ಪ್ರತಿಭಟನೆ

ಸಂಸದರ ಕಚೇರಿ ಎದುರು ಸಿಪಿಐ ಜಿಲ್ಲಾ ಮಂಡಳಿ ವತಿಯಿಂದ ಇಂದು ಪ್ರತಿಭಟನೆ ನಡೆಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಬೆಳಿಗ್ಗೆ 11.30ಕ್ಕೆ ಸಂಸದರ ಕಚೇರಿ ಬಳಿ ಸಿಪಿಐ ಕಾರ್ಯಕರ್ತರು ಸೇರಿ, ಕರ್ನಾಟಕದ ಜನರ ತೆರಿಗೆ ಹಣದಲ್ಲಿ ರಾಜ್ಯಕ್ಕೆ ಕೊಡಬೇಕಾದ ತೆರಿಗೆ ಹಣದಲ್ಲಿ ತಾರತಮ್ಯ ಎಸಗುತ್ತಿರುವ ಕೇಂದ್ರ ಸರ್ಕಾರದ ನಡೆಯನ್ನು ವಿರೋಧಿಸಿ ಮತ್ತು ರಾಜ್ಯದ ತೆರಿಗೆ ಹಣದ ಪಾಲನ್ನು ನ್ಯಾಯ ಸಮ್ಮತವಾಗಿ ರಾಜ್ಯಕ್ಕೆ ಕೊಡಬೇಕೆಂದು ಅವರು ಒತ್ತಾಯಿಸಿದ್ದಾರೆ.

## ಲೋಕಸಭೆಯಲ್ಲಿ 20 ಸ್ಥಾನಗಳು ಖಾಲಿ

ನವದೆಹಲಿ, ಫೆ. 10 – ಅಂತ್ಯಗೊಳ್ಳುತ್ತಿರುವ ಲೋಕಸಭೆಯಲ್ಲಿ 20 ಸ್ಥಾನಗಳು ಖಾಲಿ ಇವೆ. ಇವುಗಳಲ್ಲಿ ಕೆಲವು ಕಳೆದ ಮಾರ್ಚ್ ತಿಂಗಳಿನಿಂದಲೂ ಖಾಲಿ ಇವೆ.

ಬಿಜೆಪಿಯ ಪುಣೆ ಸಂಸದ ಗಿರೀಶ್ ಬಾಪಟ್ ಅವರು ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ನಿಧನರಾಗಿದ್ದರು. ಆಗಿನಿಂದಲೂ ಈ ಸ್ಥಾನ ಖಾಲಿ ಇದೆ. ಉಪ ಚುನಾವಣೆ ನಡೆಸದ ಕಾರಣಕ್ಕಾಗಿ ಚುನಾವಣಾ ಆಯೋಗವನ್ನು ಸುಪ್ರೀಂ ಕೋರ್ಟ್ ತರಾಟೆಗೂ ತೆಗೆದುಕೊಂಡಿತ್ತು.

ಟಿ.ಎಂ.ಸಿ. ಸಂಸದೆ ಮಹುವಾ ಮೊಯಿತ್ರ ಅವರು ಪ್ರಶ್ನೆ ಕೇಳಲು ಲಂಚ ಪಡೆದಿದ್ದಾರೆಂದು ನೈತಿಕ ಸಮಿತಿ ನೀಡಿದ ವರದಿ ಆಧಾರದ ಮೇಲೆ ಸದನದಿಂದ ಉಚ್ಚಾಟಿಸಲಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದ ಕಾರಣಕ್ಕಾಗಿ ಹಲವು ಸಂಸದರು ರಾಜೀನಾಮೆ ನೀಡಿದ್ದಾರೆ.

ನಾಲ್ಕು ವರ್ಷಗಳ ಕಾಲ ಜೈಲು ಶಿಕ್ಷೆಗೆ ಗುರಿಯಾಗಿದ್ದ ಕಾರಣಕ್ಕಾಗಿ ಬಿ.ಎಸ್.ಪಿ. ಸಂಸದ ಅಫ್ಜಲ್ ಅನ್ಸಾರಿ ಕಳೆದ ವರ್ಷ ಮೇ ತಿಂಗಳಿನಿಂದ ಅನರ್ಹಗೊಂಡಿರುವುದೂ ಒಂದು ಸ್ಥಾನ ಖಾಲಿ ಆಗಲು ಕಾರಣವಾಗಿದೆ.

# ರಾಜ್ಯ ಮಟ್ಟದ ಬೃಹತ್ ಜನಸ್ಪಂದನ

## ಜಿಲ್ಲೆಯ ಹಿಂದಿನ ಅರ್ಜಿಗಳ ಸಂಪೂರ್ಣ ವಿಲೆ



ದಾವಣಗೆರೆ, ಫೆ.11- ಮುಖ್ಯಮಂತ್ರಿಗಳು ವಿಧಾನ ಸೌಧದ ಮುಂಭಾಗದಲ್ಲಿ ಎರಡನೇ ರಾಜ್ಯಮಟ್ಟದ ಬೃಹತ್ ಜನಸ್ಪಂದನ ಹಮ್ಮಿಕೊಂಡಿದ್ದು, ಕಳೆದ ಜನಸ್ಪಂದನದಲ್ಲಿ ಸಲ್ಲಿಕೆಯಾಗಿದ್ದ ದಾವಣಗೆರೆ ಜಿಲ್ಲೆಯ ಎಲ್ಲಾ ಅರ್ಜಿಗಳನ್ನು ಇತ್ಯರ್ಥ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

ಫೆ.7 ರ ವರೆಗೆ ವಿವಿಧ ಇಲಾಖೆಗಳಿಂದ 43 ಅರ್ಜಿಗಳು ಬಾಕಿ ಇದ್ದವು, ಈ ಅರ್ಜಿಗಳನ್ನು ಕಾಲಮಿತಿಯಲ್ಲಿ ಹಾಗೂ ಆದ್ಯತೆಯಲ್ಲಿ ಇತ್ಯರ್ಥ ಮಾಡಲು ಎಲ್ಲಾ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು ಒಂದೇ ದಿನದಲ್ಲಿ ಎಲ್ಲಾ ಅರ್ಜಿಗಳನ್ನು ವಿಲೆ ಮಾಡಿ ಶೂನ್ಯಕ್ಕೆ ತರಲಾಗಿದೆ.

ಮೊನ್ನೆ ನಡೆದ ಜನಸ್ಪಂದನದಲ್ಲಿ ಸಲ್ಲಿಕೆಯಾಗುವ ಎಲ್ಲಾ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೆ ಮಾಡಲಾಗುತ್ತದೆ. ಸಲ್ಲಿಕೆಯಾದ ಅರ್ಜಿಗಳಲ್ಲಿ ಕುಡಿಯುವ ನೀರು, ನಾಗರೀಕ ಸೌಲಭ್ಯ, ಖಾತೆ ಬದಲಾವಣೆ, ಭೂ ಮಂಜೂರಾತಿ, ಪುನರ್ವಸತಿ, ಸಾಗುವಳಿ ಚೀಟಿ, ನಿಯಮಬಾಹಿರ ವಂಶವೃಕ್ಷ ನೀಡಿಕೆ ಸೇರಿದಂತೆ ಹಲವು ಕುಂದುಕೊರತೆಗಳ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದ್ದಾರೆ.

ಬೆಳಗ್ಗೆಯಿಂದ ಸಂಜೆಯವರೆಗೆ ನಡೆದ ಜನಸ್ಪಂದನ ಕಾರ್ಯಕ್ರಮದ ವೀಕ್ಷಣೆ ಯನ್ನು ಆನ್‌ಲೈನ್ ಮೂಲಕ ಮಾಡಲಾಯಿತು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ. ಸಂತೋಷ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ–577 001

12–02–2024

**ನಿಯಮ 8(1) ಪರಿಶಿಷ್ಟ 4**

**–: ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸು:–**

**ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ**

ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳ ಸಹಿದಾರರು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 3 ಮತ್ತು 9 ಓದಿಕೊಂಡಂತೆ, ಕಲಂ 13(2)ರನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 10–09–2023 ರಂದು ತಗಾದೆ ನೋಟೀಸ್‌ಗಳನ್ನು ನೀಡಲಾಗಿತ್ತು. ಸದರಿ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿಸಿರುವ ಮೊಬಲಗನ್ನು ಮರುಪಾವತಿ ಮಾಡಬೇಕಾಗಿತ್ತು. ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸದರಿ ನಿಯಮದ ನಿಯಮ 8 ಮತ್ತು 9ನ್ನು ಓದಿಕೊಂಡಂತೆ, ಸದರಿ ಆ್ಯಕ್ಟ್ ಪ್ರಕರಣ 13(4) ರನ್ವಯ ಪ್ರಧತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ದಿನಾಂಕ: 12–02–2024 ರಂದು ಈ ಕೆಳಕಂಡ ಸ್ವತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತೇವೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸೊತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸೊತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ, ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ:**

ಮೆ॥ ಬರ್ಕತ್ ಪೋಹ ಇಂಡಸ್ಟ್ರೀಸ್

**ಮಾಲೀಕರು:** ಹೈದರಾಲಿ ಬಿನ್ ಲೇಟ್ ಶೌಕತ್ ಅಲಿ,

ಬರಬೇಕಾದ ಸಾಲದ ಮೊತ್ತ ಎಸ್‌ಐ–135, ಅಸಲು ರೂ.1,95,52,269–00 + ಎಸ್‌ಎಸ್‌ಐ–123, ಅಸಲು ರೂ.14,79,406–00 ಇತರೆ ಖರ್ಚು, ಒಟ್ಟು ಮೊತ್ತ ರೂ.2,10,31,675–00 (ಒಟ್ಟು ಮೊತ್ತ ರೂಪಾಯಿ ಎರಡು ಕೋಟಿ ಹತ್ತು ಲಕ್ಷ ಮೂವ್ವತ್ತೊಂದು ಸಾವಿರದ ಆರು ನೂರ ಎಪ್ಪತ್ತೈದು) (ದಿನಾಂಕ 29–08–2023 ರ ವರೆಗೆ).

**ಜಾಮೀನುದಾರರ ಹೆಸರು ಮತ್ತು ವಿಳಾಸ:**

**ಸಾಲದ ಖಾತೆ ಸಂಖ್ಯೆ ಎಸ್‌ಐ–135 ರ ಜಾಮೀನುದಾರರು**

1) ಮಹಮದ್ ಅಲ್ತಾಫ್ ಅಹಮದ್ ಬಿನ್ ಅಬ್ದುಲ್ ರಜಾಕ್ ಸಾಬ್.

2) ಮಹಮದ್ ಸಲಾವುದ್ದೀನ್ ಬಿನ್ ಅಜೀಂವುದ್ದೀನ್ ಸಾಬ್.

**ಸಾಲದ ಖಾತೆ ಸಂಖ್ಯೆ ಎಸ್‌ಎಸ್‌ಐ–123 ರ ಜಾಮೀನುದಾರರು**

1) ಹುಸೇನ್‌ಪೀರ್ ಬಿನ್ ಲೇಟ್ ಇಬ್ರಾಹಿಂ ಸಾಬ್.

2) ಮೈನುದ್ದೀನ್ ಎಸ್.ಜಿ. ಬಿನ್ ಅಬ್ದುಲ್‌ಗಫೂರ್ ಸಾಬ್.

**ಬ್ಯಾಂಕಿಗೆ ಆಧಾರವಾದ ಸ್ಥಿರಾಸ್ತಿಗಳ ವಿವರ:**

**ಆಸ್ತಿ ನಂ.1:–**

ದಾವಣಗೆರೆ ನಗರದ 3ನೇ ವಾರ್ಡ್, 3ನೇ ಡಿವಿಜನ್, ಮಹಮದ್ ಆಲಿ ಜೋಹಾರ್ ಬಡಾವಣೆ, ದಾವಣಗೆರೆ ಸೈಟ್ ನಂ.291, ಡೋರ್ ನಂ.291, ಅಳತೆ ಪೂರ್ವ–ಪಶ್ಚಿಮ 21 ಅಡಿಗಳು, ಉತ್ತರ ದಕ್ಷಿಣ 55 ಅಡಿಗಳಲ್ಲಿರುವ ಸೊತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ : 40 ಅಡಿಗಳ ರಸ್ತೆ ಪಶ್ಚಿಮಕ್ಕೆ : ಸೈಟ್ ನಂ.290, ಉತ್ತರಕ್ಕೆ : 30 ಅಡಿಗಳ ರಸ್ತೆ, ದಕ್ಷಿಣಕ್ಕೆ : ಸೈಟ್ ನಂ.256.

**ಆಸ್ತಿ ನಂ.2:–**

ದಾವಣಗೆರೆ ನಗರದ 3ನೇ ವಾರ್ಡ್, 3ನೇ ಡಿವಿಜನ್, ಮಹಮದ್ ಆಲಿ ಜೋಹಾರ್ ಬಡಾವಣೆ, ದಾವಣಗೆರೆ ಸೈಟ್ ನಂ.290, ಡೋರ್ ನಂ.290, ಅಳತೆ 6.4 X 16.76 ಮೀಟರ್ಸ್ (21 X 55 ಅಡಿಗಳು) ಸೊತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಸೈಟ್ ನಂ.289, ಪಶ್ಚಿಮಕ್ಕೆ : ಸೈಟ್ ನಂ.291, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸೈಟ್ ನಂ.257.

**ಆಸ್ತಿ ನಂ.3:–**

ದಾವಣಗೆರೆ ನಗರದ 3ನೇ ವಾರ್ಡ್, 3ನೇ ಡಿವಿಜನ್, ಮಹಮದ್ ಆಲಿ ಜೋಹಾರ್ ಬಡಾವಣೆ, ದಾವಣಗೆರೆ ಸೈಟ್ ನಂ.289, ಡೋರ್ ನಂ.290, ಅಳತೆ ಪೂರ್ವ–ಪಶ್ಚಿಮ 6.4 ಮೀಟರ್ಸ್, ಉತ್ತರ–ದಕ್ಷಿಣ 16.76 ಮೀಟರ್ಸ್ (21 X 55 ಅಡಿಗಳು) ಸೊತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಸೈಟ್ ನಂ.288, ಪಶ್ಚಿಮಕ್ಕೆ : ಸೈಟ್ ನಂ.290, ಉತ್ತರಕ್ಕೆ : 30 ಅಡಿ ರಸ್ತೆ, ದಕ್ಷಿಣಕ್ಕೆ : ಸೈಟ್ ನಂ.258.

**ಆಸ್ತಿ ನಂ.4:–**

ದಾವಣಗೆರೆ ನಗರದ 3ನೇ ವಾರ್ಡ್, 4ನೇ ಡಿವಿಜನ್, ಚಾಮರಾಜಪೇಟೆ ಸಿ ಬ್ಲಾಕ್, ಮುದ್ದ ಭೋವಿ ಕಾಲೋನಿ, ದಾವಣಗೆರೆಯಲ್ಲಿ ಬರತಕ್ಕ ಸೈಟ್ ನಂ.34 ಹಳೆ ಡೋರ್ ನಂ.698/1 ರಿಂದ 5, ಚಾಲ್ತಿ ಮಹಾನಗರಪಾಲಿಕೆ ಡೊರ್ ನಂ.790/1–2, ಅಳತೆ ಪೂರ್ವ–ಪಶ್ಚಿಮ 75 ಅಡಿಗಳು, ಉತ್ತರ–ದಕ್ಷಿಣ 25 ಅಡಿಗಳ ಸೊತ್ತಿನಲ್ಲಿರುವ ವಾಸದ ಮನೆ, (75X25 =1875 ಚದರ ಅಡಿಗಳು) ವಾಸದ ಮನೆಗೆ ಚೆಕ್ಕುಬಂದಿ:– ಪೂರ್ವಕ್ಕೆ : ಮುಖ್ಯ ರಸ್ತೆ, ಪಶ್ಚಿಮಕ್ಕೆ : ಕನ್ಸರ್‌ವೆನ್ಸಿ ರಸ್ತೆ, ಉತ್ತರಕ್ಕೆ : ಬೇರೆಯವರ ಮನೆ, ದಕ್ಷಿಣಕ್ಕೆ : ಅಕ್ಕಿ ಸಂಗಪ್ಪನವರ ಮನೆ.

**ಆಸ್ತಿ ನಂ.5:–**

ದಾವಣಗೆರೆ ನಗರದ 3ನೇ ವಾರ್ಡ್, 4ನೇ ಡಿವಿಜನ್, ಬೇತೂರು ರಸ್ತೆ, ಚಾಮರಾಜಪೇಟೆ, ದಾವಣಗೆರೆಯಲ್ಲಿ ಬರತಕ್ಕ ಸೈಟ್ ನಂ.33 ಹಳೆ ಡೋರ್ ನಂ.789/1 ರಿಂದ 6, ಚಾಲ್ತಿ ಮಹಾನಗರಪಾಲಿಕೆ ಡೊರ್ ನಂ.789, ಅಳತೆ ಪೂರ್ವ–ಪಶ್ಚಿಮ 30 ಅಡಿಗಳು, ಉತ್ತರ–ದಕ್ಷಿಣ 25 ಅಡಿಗಳ ಸೊತ್ತಿನಲ್ಲಿರುವ (30X25 =750 ಚದರ ಅಡಿಗಳು) ವಾಸದ ಮನೆಗೆ ಚೆಕ್ಕುಬಂದಿ:– ಪೂರ್ವಕ್ಕೆ : ಮುಖ್ಯ ರಸ್ತೆ, ಪಶ್ಚಿಮಕ್ಕೆ : ತಿಪ್ಪೇಸ್ವಾಮಿಯವರ ಮನೆ, ಉತ್ತರಕ್ಕೆ : ಶೌಕತ್ ಆಲಿಯವರ ಮನೆ, ದಕ್ಷಿಣಕ್ಕೆ : ಎ. ಹನುಮಂತಪ್ಪನವರ ಮನೆ.

ಸಹಿ/–

ಸ್ಥಳ : ದಾವಣಗೆರೆ

ದಿನಾಂಕ: 12–02–2024

**ಅಧಿಕೃತ ಅಧಿಕಾರಿ**

ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಜಯನಗರ 'ಬಿ' ಬ್ಲಾಕ್, ನಂ.997/3, ಬಾಲಾಜಿ ಅಪಾರ್ಟ್‌ಮೆಂಟ್ ಹತ್ತಿರ ವಾಸ್ತು ಪ್ರಕಾರ ಈಶಾನ್ಯ ಮೂಲೆಯಲ್ಲಿ ದೇವರ ಕೋಣೆ, ಆಗ್ನೇಯದಲ್ಲಿ ಅಡಿಗೆ ಮನೆ, ವಿಶಾಲವಾದ ಹಾಲ್ ಇರುವ 2 ಅಟ್ಯಾಚ್ಡ್ ಬೆಡ್ ರೂಮ್ ಮನೆ ಮೊದಲ ಮಹಡಿಯಲ್ಲಿ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ:
ಮೊ : 96113 09287

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, Rate - 2800/-
30x40 East, 30x40 North,
40x60 East, 40x60 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಬಿ.ಕಾಂ ಆಗಿರುವ ಮಹಿಳಾ ಅಭ್ಯರ್ಥಿಗಳು, ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ.
ನವೋದಯ ಚಿಟ್ ಫಂಡ್ಸ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ, ಭೇಟಿಯ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5 ರವರೆಗೆ. ಸಂಪರ್ಕಿಸಿ :
08192 254736

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
90365-74144

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಶೋರೂಂನಲ್ಲಿ Tally ಗೊತ್ತಿರುವ ಅಕೌಂಟೆಂಟ್ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ: ಮಾಗನೂರು ಎಂಟರ್ ಪ್ರೈಸಸ್
ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
97436 36000, 8197696774

**3 Years Lease 15 Lakh**
Hitech ಸಾಮಾನುಗಳನ್ನು ಬಳಸಿಕೊಂಡಿರುವಂತಹ ವಾಲ್ ರೂಪ್, ಇಟಾಲಿಯನ್ ಕಿಚನ್ ಉಳ್ಳ ಡಬಲ್ ಬೆಡ್ ರೂಮ್ ಮನೆ ಲೀಸ್‌ಗಿದೆ, 24 ಗಂಟೆ ನೀರಿನ ಸೌಲಭ್ಯವಿದೆ, ಎಸ್.ಎ. ರವೀಂದ್ರನಾಥ್ ಬಡಾವಣೆ ಜಿಲ್ಲಾ ಪಂಚಾಯಿತಿ ಹತ್ತಿರ, ಹೈಟೆಕ್ ಆಸ್ಪತ್ರೆ ಹತ್ತಿರ, ಲಲಿತ ಸ್ಕೂಲ್.
90364 66669

**ಬಾಡಿಗೆಗೆ ಇದೆ**
Door No- 801/2 Old PB Road ಗೆ ಅಭಿಮುಖವಾಗಿರುವ ಪಿಸಾಳೆ ಕಾಪೌಂಡ್‌ನಲ್ಲಿ ಶಿವಯೋಗಿಶ್ವರ ಸ್ಟೋರ್ ಪಕ್ಕ ಮಳಿಗೆ ಖಾಲಿ ಇದೆ. ಸಂಪರ್ಕಿಸಿ :
97407 70399
80739 12767

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ. ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
97400 01117

**ಸುವರ್ಣಾವಕಾಶ**
MG ಗೋಲ್ಡ್ ಕಂಪನಿ
ನಿಮ್ಮ ಹಳೆಯ ಚಿನ್ನದ ಆಭರಣಗಳನ್ನು ಅಥವಾ ನೀವು ಅಡವು ಇಟ್ಟ ನಿಮ್ಮ ಚಿನ್ನ ಆಭರಣಗಳನ್ನು ಬಿಡಿಸಿ, ಇಂದಿನ ಸೂಕ್ತ ಬೆಲೆಗೆ ತೆಗೆದುಕೊಳ್ಳುತ್ತೇವೆ ಮತ್ತು ನಿಮಗೆ ಹೊಂದುವ ಅತ್ಯುತ್ತಮ ನಂ.1 ಕ್ವಾಲಿಟಿಯ ಅದೃಷ್ಟ ಜಾತಿ ರತ್ನ ಹರಳುಗಳು ನಮ್ಮಲ್ಲಿ ದೊರೆಯುತ್ತವೆ.
ಮೊ.: 8884777159, 7019426891

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ.
85508 36642, 76191 70395

**ಸೈಟುಗಳು ಮಾರಾಟಕ್ಕಿವೆ**
30x50 ಟಾಟಾ ಶೋ ರೂಮ್ ಹಿಂಭಾಗ ಸಿದ್ಧಗಂಗಾ ಲೇಔಟ್ ಕಾಂಕ್ರೀಟ್ ರೋಡ್, Good Location, 120 ಅಡಿ ರಿಂಗ್ ರೋಡ್ ಹಿಂಭಾಗ, Near PB Road, ಆವರಗೆರೆ, ದಾವಣಗೆರೆ. ಸಂಪರ್ಕಿಸಿ :
98452 95326

**ಷೇರು ಬಾಂಡ್ ಕಳೆದಿದೆ**
ದಾವಣಗೆರೆ ಷುಗರ್ ಕಂಪನಿ ಲಿಮಿಟೆಡ್ ಕುಕ್ಕವಾಡ ಇಲ್ಲಿ ಹೆಚ್. ಈಶ್ವರಪ್ಪ ತಂದೆ ಮುರಿಗೆಪ್ಪ ಆದ ನಾನು ಷೇರ್ ಬಾಂಡ್‌ಗಳನ್ನು ಹೊಂದಿದ್ದು 1) ಸರ್ಟಿಫಿಕೇಟ್ ನಂ. 24870 Folio No - DSE0158 ಮತ್ತು ಷೇರ್ ಬಾಂಡ್ ನಂ. 2) Folio No - Folio No. DSE0101 ಸರ್ಟಿಫಿಕೇಟ್ ನಂ. 5556 ಆಗಿದ್ದು ಸದರಿ ಷೇರ್ ಬಾಂಡ್‌ಗಳನ್ನು ದಿನಾಂಕ : 02.01.2024 ರಂದು ಮನೆಯನ್ನು ಸ್ವಚ್ಛಗೊಳಿಸುವಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ಮೊಬೈಲ್ ನಂಬರ್‌ಗೆ ತಿಳಿಸಬೇಕಾಗಿ ವಿನಂತಿ. ಹೆಚ್. ಈಶ್ವರಪ್ಪ 87620 46721

**ಮನೆ ಬಾಡಿಗಿಗೆ ಇದೆ**
2 ಬೆಡ್ ರೂಮ್, ಹಾಲ್, ಡೈನಿಂಗ್ ಹಾಲ್, ಪೂಜಾ ರೂಂ, ಅಡುಗೆ ಮನೆ, ಸ್ಟೋರ್ ರೂಮ್ ಎಲ್ಲಾ ಭಾಗಗಗಳು ವಿಶಾಲವಾಗಿರುವ ಮೊದಲನೇ ಅಂತಸ್ತಿನ ಮನೆ ಬಾಡಿಗೆಗೆ ಇದೆ. 8ನೇ ಮೇನ್, ಪಿಜೆ.ಬಡಾವಣೆ. ಸಂಪರ್ಕಿಸಿ:
90088 61074, 08924 68082

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಮನೆ ಬಾಡಿಗೆಗೆ ಇದೆ**
30x50 ಪೂರ್ವ ಬಾಗಿಲು 3 ಬೆಡ್ ರೂಂ, ಗ್ರೌಂಡ್ ಫ್ಲೋರ್‌ನಲ್ಲಿ ಸರಸ್ವತಿ ನಗರ, ಡಾಬಾ ಸ್ಟಾಪ್, ದಾವಣಗೆರೆ
98802 76367
90607 90962

**ಮನೆ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 30x50ರಲ್ಲಿ ಪಶ್ಚಿಮ ದಿಕ್ಕಿನಲ್ಲಿ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: ಪ್ರಕಾಶ ಟಿವಿ ಸೆಂಟರ್
ಕುರುಬರ ಹಾಸ್ಟೆಲ್ ಎದುರು, ಶ್ರೀಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
ಟೆಲಿಕಾಲರ್, ಮಹಿಳಾ ಸಹಾಯಕರು, ಮಹಿಳಾ ಫೀಲ್ಡ್‌ವರ್ಕ್, ಪುರುಷರು ಮತ್ತು ಮಹಿಳೆಯರು ಪಾರ್ಟ್ ಟೈಂ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ
88614 38237, 79751 07268

**DULL IN MATHS**
IIT FOUNDATION (JEE)
FROM 5 std to 10 std
CBSE ,ICSE , IGCSE
NIJALINGAPPA BADAVANE
M : 97390 66956

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ನೇರ ಪರೀಕ್ಷೆಗಳು**
SSLC , PUC
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.Com, MA, M.Com, MBA (ALL),
ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**ಸಾಯಿಬಾಬಾ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಬೋರ್‌ವೆಲ್ ಕೊರೆಯುವುದು
41/2ಇಂಚು, 350 ರಿಂದ 400ರವರೆಗೆ ಬೋರ್ ಕೊರೆಯುವುದು.
99640 78484
95906 15776

**WANTED**
Lady CRM 2 No's
(Customer Relationship Manager) with any degree @
Swadeshi Group
Hadadi Road, Opp. SS. Chowtry, Davangere.
95384 40307
98867 44970

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ರಕ್ತ ದಾನ ಶ್ರೇಷ್ಠ ದಾನ

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ॥ ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**CHANGE OF NAME**
I Tinesh kumar s/o Narinder kumar 46 year, resident @ # 544/30A in 1st floor, 1st cross, Yellamma krupa Davanagere. Above said name entered in my Aadhar card in my passport my name wrongly entered as Tinesh, My name Tinesh kumar it is correct and i will continue the same name in future aslo sworn before notary Davanagere on 10.02.2024.
Sd - Tinesh kumar



## ಚಾಮುಂಡಿ ಬೆಟ್ಟದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಪೂಜೆ

ಮೈಸೂರು, ಫೆ. 11 - ಕೇಂದ್ರ ಗೃಹ ಸಚಿವ ಹಾಗೂ ಬಿಜೆಪಿ ಹಿರಿಯ ನಾಯಕ ಅಮಿತ್ ಷಾ ಅವರು ಭಾನುವಾರ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದ್ದು, ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತಿತರರು ಅಮಿತ್ ಷಾ ಜೊತೆಗಿದ್ದರು.

## ಇಂದು - ನಾಳೆ ಬಿಜೆಪಿ ಮಹಿಳಾ ಮೋರ್ಚಾ ರಾಷ್ಟ್ರಾಧ್ಯಕ್ಷೆ ವನತಿ ಶ್ರೀನಿವಾಸ್ ಪ್ರವಾಸ

ದಾವಣಗೆರೆ, ಫೆ. 11- ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ರಾಷ್ಟ್ರಾಧ್ಯಕ್ಷೆ ವನತಿ ಶ್ರೀನಿವಾಸ್ ನೇತೃತ್ವದಲ್ಲಿ ದೇಶದ 25 ಬಿಜೆಪಿ ಮಹಿಳಾ ನಾಯಕಿಯರು ನಾಳೆ ದಿನಾಂಕ 12 ಮತ್ತು 13 ರಂದು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಸಂಘಟನಾ ಪ್ರವಾಸ ಕೈಗೊಳ್ಳಲಿದ್ದಾರೆಂದು ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷರಾದ ಮಂಜುಳಾ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪ್ರವಾಸದಲ್ಲಿ ನಾಳೆ ದಿನಾಂಕ 12 ರಂದು ಐತಿಹಾಸಿಕ ಸ್ಮಾರಕಗಳು ಅಥವಾ ದೇವಸ್ಥಾನಗಳ ಭೇಟಿ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರ ಜೊತೆಗೆ ಸಂವಾದ, ಶಾಲಾ-ಕಾಲೇಜುಗಳಲ್ಲಿ ಯುವ ಮತದಾರರ ಭೇಟಿ, ಮಹಿಳಾ ಕಾರ್ಯಕರ್ತೆಯರ ಮನೆಯಲ್ಲಿ ಭೋಜನ, ಬೂತ್ ಮಟ್ಟದಲ್ಲಿ ಸಭೆಗಳನ್ನೂ ಸಹ ಆಯೋಜಿಸಲಾಗುವುದು ಎಂದರು.

ನಾಡಿದ್ದು ದಿನಾಂಕ 13 ರಂದು ಸರ್ಕಾರಿ ಶಾಲಾ-ಕಾಲೇಜುಗಳ ಭೇಟಿ, ಜಿಲ್ಲಾ ಪದಾಧಿಕಾರಿಗಳ ಸಭೆ, ಎನ್‌ಜಿಓ ಹಾಗೂ ಸ್ವಯಂ ಸೇವಕರ ಜೊತೆಗೆ ಸಂವಾದ, ಎಸ್ಸಿ, ಎಸ್ಟಿ ಮಹಿಳಾ ಕಾರ್ಯಕರ್ತೆಯರ ಮನೆಯಲ್ಲಿ ಊಟ, ಹಿರಿಯ ಮಹಿಳಾ ಕಾರ್ಯಕರ್ತೆಯರೊಂದಿಗೆ ಸಭೆ, ಕಮಲ್ ಮಿತ್ರ ಕಾರ್ಯಕ್ರಮ, ಎಸ್.ಜಿ.ಎಸ್. ತಂಡಗಳೊಂದಿಗೆ ಸಭೆ ನಡೆಯಲಿದೆ ಎಂದು ಹೇಳಿದರು. ದೇಶದ ಪ್ರಗತಿಯಲ್ಲಿ ಶೇ. 18-20 ರಷ್ಟು ಮಹಿಳೆಯರ ಕೊಡುಗೆ ಇದೆ. ಎಸ್.ಹೆಚ್.ಇ. ಸದಸ್ಯರು ವಾರ್ಷಿಕ 500 ಕೋಟಿ ರೂ. ವ್ಯವಹಾರವನ್ನು ಸರಳ್ ಡಿಜಿಟಲ್ ಆಪ್ ಮೂಲಕ ನಡೆಸುತ್ತಿದ್ದು, ಜಿಡಿಪಿಗೆ ಶೇ. 2 ಕೊಡುಗೆ ನೀಡುತ್ತಿದ್ದಾರೆ ಎಂದರು.

ದಾವಣಗೆರೆ ಸಂಚಾಲಕರಾದ ಜಯ್ಯಮ್ಮ ಮಾತನಾಡಿ, ದಾವಣಗೆರೆಗೆ ಬಿಜೆಪಿ ಮಹಿಳಾ ನಾಯಕಿ ಪಾಂಡಿಚೆರಿಯ ಹೇಮಾಮಾಲಿನಿ ಅವರು ಆಗಮಿಸುತ್ತಿದ್ದು, ಅವರ ನೇತೃತ್ವದಲ್ಲಿ ಇಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ದಾವಣಗೆರೆ ಉತ್ತರ-ದಕ್ಷಿಣದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳಾದ ಭಾಗ್ಯ, ರೇಣುಕಾ, ನೀತಾ ಬಳ್ಳಾರಿ, ಪುಷ್ಪಾ ವಾಲಿ, ರೇಖಾ ಗಂಡಗಾಳೆ, ವಿಶ್ವಾಸ್ ಹೆಚ್.ಪಿ. ಉಪಸ್ಥಿತರಿದ್ದರು.

## ನಗರದಲ್ಲಿ ನಾಳೆ ಶ್ರೀ ಗುರು ಬಾಲ ಶನೇಶ್ವರಸ್ವಾಮಿ ಮಹಾಕ್ಷೇತ್ರದ 2ನೇ ವರ್ಷದ ವಾರ್ಷಿಕೋತ್ಸವ



ದಾವಣಗೆರೆ, ಫೆ. 11 - ನಗರದ ಮಹಾಲಕ್ಷ್ಮಿ ಬಡಾವಣೆ, ಎತ್ತಿನಸಂತೆ ಹಿಂಭಾಗದಲ್ಲಿರುವ ನಗರದ ಶ್ರೀ ಸಚ್ಚಿದಾನಂದ ಸ್ವರೂಪಿ ಶ್ರೀ ಗುರು ಬಾಲ ಶನೇಶ್ವರಸ್ವಾಮಿ ಮಹಾಕ್ಷೇತ್ರದ 2ನೇ ವರ್ಷದ ವಾರ್ಷಿಕೋತ್ಸವವು ನಾಡಿದ್ದು ದಿನಾಂಕ 13 ಮತ್ತು 14ರಂದು ನಡೆಯಲಿದೆ.

ದಿನಾಂಕ 13ರ ಮಂಗಳವಾರ ಬೆಳಿಗ್ಗೆ 6-30 ಕ್ಕೆ ಕೆಂಡದಾರ್ಚನೆ ಮತ್ತು 7-30ಕ್ಕೆ ಶ್ರೀ ವೀರಭದ್ರಸ್ವಾಮಿಯ ಗುಗ್ಗಳ ಕಾರ್ಯಕ್ರಮವು ಮೆರವಣಿಗೆಯೊಂದಿಗೆ ನೆರವೇರಲಿದೆ.

ದಿನಾಂಕ 14ರ ಬುಧವಾರ ಬೆಳಿಗ್ಗೆ 5-00 ಕ್ಕೆ ಅಭಿಷೇಕ, ಬೆಳಿಗ್ಗೆ 12-30 ಕ್ಕೆ ವೇದಿಕೆ ಸಮಾರಂಭವಿರುತ್ತದೆ. ಸಂಜೆ 5-30 ಕ್ಕೆ ಶ್ರೀ ಗುರು ಬಾಲಶನೇಶ್ವರ ಸ್ವಾಮಿಯ ಉತ್ಸವವು ರಾಜಬೀದಿಯಲ್ಲಿ ಭಾಜಾ ಭಜಂತ್ರಿಯೊಂದಿಗೆ ಮೆರವಣಿಗೆ ನಡೆಯಲಿದೆ..

ಶ್ರೀ ಉಜ್ಜಯಿನಿ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಕೋಣಂದೂರು, ಶ್ರೀ ಗಂಗಾಧರ ಮಹಾಸ್ವಾಮಿಗಳು ಧರ್ಮದರ್ಶಿಗಳು, ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನ, ಹೊನ್ನಪ್ಪಹಳ್ಳಿ, ಚಿಕ್ಕಬುಳ್ಳಾಪುರ ಅವರುಗಳು ಸಾನ್ನಿಧ್ಯ ವಹಿಸುವರು.

ವಿಶೇಷ ಆಹ್ವಾನಿತರಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ವಿಧಾನ ಪರಷತ್ ಸದಸ್ಯ ಎಸ್. ರುದ್ರೇಗೌಡ, ಮಹಾನಗರ ಪಾಲಿಕೆ ಸದಸ್ಯರಾದ ಜಯ್ಯಮ್ಮಗೋಪಿನಾಯ್ಕ ಆಗಮಿಸುವರು.

ಟಿ.ಎಂ. ಉಮಾಪತಯ್ಯ, ಜೆ.ಸಿ. ಕಾಂತರಾಜ್ ಗೌಡ, ಕಾಂ. ಹೆಚ್.ಜಿ. ಉಮೇಶ್ ಆವರಗೆರೆ, ವೈ. ಜಿ.ಎಸ್. ಸತೀಶ್ ಅವರುಗಳಿಗೆ ಸನ್ಮಾನಿಸಲಾಗುವುದು.

ಈ ಕಾರ್ಯಕ್ರಮಗಳಿಗೆ ಭಕ್ತಾದಿಗಳು ಆಗಮಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಸಚ್ಚಿದಾನಂದ ಸ್ವರೂಪಿ ಶ್ರೀ ಶನೇಶ್ವರಸ್ವಾಮಿ ಸೇವಾ ಸಮಿತಿ ಅಧ್ಯಕ್ಷ ಟಿ.ಎನ್. ನಟರಾಜ್, ಪ್ರಧಾನ ಕಾರ್ಯದರ್ಶಿ ಡಿ. ಶಾಂತಕುಮಾರ್, ಖಜಾಂಚಿ ಹೆಚ್.ಎಂ. ಹಾಲೇಶ್ ಕೋರಿದ್ದಾರೆ.

## ಆಶಾ ಕಾರ್ಯಕರ್ತೆಯರಿಂದ ವಿಧಾನಸೌಧ ಚಲೋ

ದಾವಣಗೆರೆ, ಫೆ. 11- ಸಂಯುಕ್ತ ಆಶಾ ಕಾರ್ಯಕರ್ತೆಯರ ರಾಜ್ಯ ಸಂಘದಿಂದ ನಾಡಿದ್ದು ದಿನಾಂಕ 13-14 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೆಳಿಗ್ಗೆ 10.30 ಕ್ಕೆ ಸಮಾವೇಶಗೊಂಡು 'ವಿಧಾನಸೌಧ ಚಲೋ' ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾ ಮುಖಂಡರಾದ ಮಂಜುನಾಥ್ ಕುಕ್ಕುವಾಡ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ರಾಜ್ಯದ ಮೂಲೆ ಮೂಲೆಗಳಿಂದ 20 ಸಾವಿರಕ್ಕೂ ಹೆಚ್ಚು ಆಶಾ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ದಾವಣಗೆರೆ ಜಿಲ್ಲೆಯಿಂದಲೇ 1300 ಕಾರ್ಯಕರ್ತೆಯರು ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಅಣಬೇರು ತಿಪ್ಪೇಸ್ವಾಮಿ, ಆಶಾ, ಮಂಜುಳಾ, ದೇವಮ್ಮ ಭಾಗ್ಯಮ್ಮ ಹಾಲಮ್ಮ ಉಪಸ್ಥಿತರಿದ್ದರು.

## ತೀರ್ಪುಗಾರರಾಗಿ ಹನುಮಂತಪ್ಪ, ಕರಿಬಸವರಾಜು ಆಯ್ಕೆ





ದಾವಣಗೆರೆ, ಫೆ 11 - ಭಾರತೀಯ ವೇಟ್‌ಲಿಫ್ಟಿಂಗ್ ಫೆಡರೇಷನ್ ರಾಷ್ಟ್ರೀಯ ತೀರ್ಪುಗಾರರಾಗಿ ನಗರದ ವಕೀಲ ಕೆ.ಎನ್. ಹನುಮಂತಪ್ಪ ಹಾಗೂ ನಗರ ಪಾಲಿಕೆ ವ್ಯಾಯಾಮ ಶಾಲೆಯ ರಾಷ್ಟ್ರೀಯ ಕ್ರೀಡಾಪಟು ಕರಿಬಸವರಾಜು ಬಿ.ಎನ್. ಇವರುಗಳು ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ದಾವಣಗೆರೆ ಅಧ್ಯಕ್ಷ ಹೆಚ್. ಮಹೇಶ್ ತಿಳಿಸಿದ್ದಾರೆ.

ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ ರೆಫ್ರಿಯಾಗಿ ಆಯ್ಕಾಗಿರುವ ಇವರುಗಳಿಗೆ ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ರಾಮಮಂದಿರ ನಿರ್ಮಾಣದಿಂದ ಹೆಚ್ಚುತ್ತಿರುವ ಅಧ್ಯಾತ್ಮಿಕತೆ

### ಹರಿಹರದ ತುಂಗಾರತಿ ಕಾರ್ಯಕ್ರಮದಲ್ಲಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್



ಹರಿಹರ, ಫೆ. 11- ರಾಮ ಮಂದಿರ ನಿರ್ಮಾಣ ಆಗಿದ್ದರಿಂದ ದೇಶದಲ್ಲಿ ಅಧ್ಯಾತ್ಮಿಕ ಭಾವನೆಗಳು ಹೆಚ್ಚಾಗಿದ್ದು, ಮುಂದಿನ ದಿನಗಳಲ್ಲಿ ಭಾರತ ಹಿಂದೂ ರಾಷ್ಟವಾಗಿ ಹೊರ ಹೊಮ್ಮುವ ಸಾಧ್ಯತೆ ಹೆಚ್ಚು ಇದೆ ಎಂದು ಬಿಜಾಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಕೋಡಿಯಾಲ ಹೊಸಪೇಟೆ ಗ್ರಾಮದಲ್ಲಿ ನಡೆದ ತುಂಗಾರತಿ ಕಾರ್ಯಕ್ರಮದ ವೇದಿಕೆ ಸಮಾರಂಭವನ್ನು ಉದ್ಘಾಟಿಸಿ ಹಾಗೂ ವಿಶ್ವಮಾತೆ ಪುಣ್ಯಕೋಟಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ದೇಶದಲ್ಲಿ ರಾಮಮಂದಿರ ನಿರ್ಮಾಣ ಮಾಡಿದ್ದರಿಂದ ದಿನದಿಂದ ದಿನಕ್ಕೆ ದೇಶದ ಜನತೆಯಲ್ಲಿ ಅಧ್ಯಾತ್ಮಿಕ ಭಾವನೆಗಳು ಹೆಚ್ಚಾಗುವುದರ ಜೊತೆಗೆ, ಹಿರಿಯರು ಹಾಕಿಕೊಂಡು ಬಂದಿರುವ ಸಂಪ್ರದಾಯವನ್ನು ಉಳಿಸಿ, ಬೆಳೆಸುವುದರ ಕಡೆ ಹೆಚ್ಚು ಆಸಕ್ತಿ ತೋರಿಸಲಾಗುತ್ತಿದೆ ಎಂದು ಹೇಳಿದರು.

ಜೀವ ಜಲರಾಶಿಗಳನ್ನು ಮತ್ತು ಪರಿಸರ ಸಂರಕ್ಷಣೆ ಮಾಡಿದಾಗ ಸಮಾಜದಲ್ಲಿ ಮಠಗಳ ಹಿರಿಮೆ ಹೆಚ್ಚಾಗುತ್ತದೆ. ಅದನ್ನು ಬಿಟ್ಟು ರಾಜಕೀಯ ವ್ಯಕ್ತಿಗಳಿಗೆ ಹೊಗಳಿಕೆಯನ್ನು ಮಾಡುತ್ತಾ ಸಾಗಿದರೆ ಮಠದ ಪ್ರಾಮುಖ್ಯತೆ ಕಡಿಮೆಯಾಗಿ ಸಮಾಜದಲ್ಲಿ ಮಠಗಳ ಬಗ್ಗೆ ಭಕ್ತರಲ್ಲಿ ಅಪಸ್ವರದ ಮಾತುಗಳು ಕೇಳಿಬರುತ್ತವೆ.

ಧರ್ಮವನ್ನುಯಾರುರಕ್ಷಣೆಮಾಡುತ್ತಾರೋ ಅವರನ್ನು ಧರ್ಮ ರಕ್ಷಣೆ ಮಾಡುತ್ತದೆ. ಮನುಷ್ಯನ ದೇಹಕ್ಕೆ ಮತ್ತು ಪ್ರಾಣಿ, ಪಕ್ಷಿಗಳಿಗೆ ನೀರು ಅತ್ಯವಶ್ಯಕ ವಸ್ತುವಾಗಿದ್ದು ಹಾಗಾಗಿ ನದಿಗೆ ವಿಶೇಷ ಪೂಜೆ, ಆರತಿ ಮಾಡುವುದರಿಂದ ಜೀವಕ್ಕೆ ಯಾವುದೇ ರೀತಿಯ ಮಾರಕವಾದ ರೋಗ ಲಕ್ಷಣಗಳು ಕಂಡು ಬರುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಮೆಡಿಕಲ್, ಇಂಜಿನಿಯರಿಂಗ್ ಸೇರಿದಂತೆ, ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರಯುವುದನ್ನು ಕಾಣುತ್ತಿದ್ದೇವೆ. ಆದರೆ ಗೋ ರಕ್ಷಣೆ ಮಾಡುವ ನಿಟ್ಟಿನಲ್ಲಿ ಗೋ ಶಾಲೆಯನ್ನು ತೆರಯುವರ ಸಂಖ್ಯೆ ಕಡಿಮೆಯಾಗಿದ್ದು, ಪುಣ್ಯಕೋಟಿ ಮಠದಲ್ಲಿ ಗೋ ರಕ್ಷಣೆ ಮಾಡಲು ಮುಂದೆ ಬಂದರೆ ನನ್ನ ಕಡೆಯಿಂದ ಗೋವುಗಳನ್ನು ಕೊಡುವುದಕ್ಕೆ ಸಿದ್ದನಿದ್ದು, ಅವುಗಳನ್ನು ಚೆನ್ನಾಗಿ ಲಾಲನೆ, ಪಾಲನೆ ಮಾಡಿ. ನಂತರ ಆಯಸ್ಸು ಮುಗಿದ ನಂತರ ಅವುಗಳನ್ನು ಖಸಾಯಿ ಖಾನೆಗಳಿಗೆ ಮಾರಾಟ ಮಾಡದೆ ಮತ್ತೆ ನಮಗೆ ವಾಪಸ್ ಕೊಡುವುದಕ್ಕೆ ಸಿದ್ದರಿದ್ದರೆ ಮಾತ್ರ ಕೊಡುವುದಾಗಿ ಹೇಳಿದರು.

ನನ್ನ ಗೋ ಶಾಲೆಯಲ್ಲಿ ಕನಿಷ್ಠ 40 ಬಗೆಯ ಉತ್ಪನ್ನಗಳನ್ನು ಸಿದ್ದತೆ ಮಾಡಲಾಗುತ್ತದೆ. ಜೊತೆಗೆ ದಿನಕ್ಕೆ 2 ಸಾವಿರ ಶುದ್ಧ ವಿಭೂತಿ, ಕುಂಕುಮ, ಕರ್ಪೂರ, ಸೇರಿದಂತೆ ಅನೇಕ ವಸ್ತುಗಳ ಉತ್ಪಾದನೆಯಾಗುತ್ತದೆ ಮತ್ತು ವಿವಿಧ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಆ ಮೂಲಕ ಸುಮಾರು 3.5. ಸಾವಿರ ಯುವಕರಿಗೆ ಉದ್ಯೋಗಗಳನ್ನು ಒದಗಿಸುವ ಮೂಲಕ ಅವರು ಸ್ವಾವಲಂಬನೆ ಜೀವನ ನಡೆಸುವುದಕ್ಕೆ ದಾರಿ ಮಾಡಿಕೊಡಲಾಗಿದೆ ಎಂದರು.

ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ ಸಜ್ಜನ ಜನನಾಯಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಶ್ರೀ ಮಠದ ಮುಂದಿನ ಭಾಗದಲ್ಲಿ ನದಿಗೆ ಹರಿಯುವ ಕಲುಷಿತ ನೀರಿನಿಂದ ಉಂಟಾಗುವ ಸಮಸ್ಯೆಯನ್ನು ಪರಿಹರಿಸಲು ಮೇಲ್‌ಡೆಕ್ ಹಾಕುವುದಕ್ಕೆ ಶಾಸಕ ಪ್ರಕಾಶ್ ಕೋಳಿವಾಡ ಮುಂದಾಗುವಂತೆ ಹೇಳಿದರು.

ಪ್ರಾಸ್ತಾವಿಕ ನುಡಿಗಳ ಭಾಷಣದಲ್ಲಿ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮಿಗಳು ಮಠಕ್ಕೆ ಸಹಕಾರ ಮಾಡಿರುವ ಎಲ್ಲರನ್ನೂ ಸ್ಮರಿಸಿದರು.

ಈ ವೇಳೆ ಪುನೀತ್ ಶಾಸ್ತ್ರಿಗಳು, ರಾಣೇಬೆನ್ನೂರು, ಕುಮಾರ್ ಹಿರೇಮಠ ಶಾಸ್ತ್ರಿಗಳು ಹರಿಹರ, ಮಂಜಯ್ಯ ಬ್ಯಾಡಗಿ, ರೇಣುಕಸ್ವಾಮಿ, ರೇಣುಕಯ್ಯ ಬ್ಯಾಡಗಿ ಅವರುಗಳು ತುಂಗಾರತಿ ಮಾಡಿದರು.

ಈ ಸಂದರ್ಭದಲ್ಲಿ ಶ್ರೀ ನಂಜಾವಧೂತ ಸ್ವಾಮಿಗಳು, ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹುಕ್ಕೇರಿ, ಸಿದ್ದರಾಮ ಶಿವಾಚಾರ್ಯ ಸ್ವಾಮಿಗಳು, ವೃಷಭೇಂದ್ರ ದೇಶಿಕೇಂದ್ರ ಸ್ವಾಮಿಗಳು, ಸಿದ್ದಲಿಂಗ ದೇವರು, ಶಾಸಕರಾದ ಬಿ.ಪಿ. ಹರೀಶ್, ಪ್ರಕಾಶ್ ಕೋಳಿವಾಡ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಆರೈಕೆ ಆಸ್ಪತ್ರೆಯ ಡಾ. ರವಿಕುಮಾರ್, ತಪೋವನದ ಶಶಿಕುಮಾರ್ ಮೆಹರ್ವಾಡೆ, ಡಾ. ಹೆಚ್. ವಿಶ್ವನಾಥ್, ಮಂಜುನಾಥ್ ಗೌಡ್ರು, ಚೋಳಪ್ಪ, ರಾಣೇಬೆನ್ನೂರು ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಚೆನ್ನಬಸವ ದೇವರು, ಗ್ರಾಪಂ ಅಧ್ಯಕ್ಷೆ ರೂಪಾ ಮಂಜುನಾಥ್, ಗ್ರಾಪಂ ಸದಸ್ಯರಾದ ಚೇತನ್ ಪೂಜಾರ್, ಮಂಜುನಾಥ್ ಜಿಗಳಿ, ನಾಗರಾಜ್ ಜಿಗಳಿ, ದಿನೇಶ್ ನಲವಾಗಲು, ಗುತ್ತಿಗೆದಾರ ಕೆ.ಬಿ. ಮಂಜುನಾಥ್ ಹಾಗೂ ಇತರರು ಹಾಜರಿದ್ದರು.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ವಾರ್ಷಿಕೋತ್ಸವ, ರಥೋತ್ಸವ



ದಾವಣಗೆರೆ, ಫೆ. 11- ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ 26 ನೇ ವಾರ್ಷಿಕೋತ್ಸವ ಹಾಗೂ ರಥೋತ್ಸವ ಕಾರ್ಯಕ್ರಮ ನಾಳೆ ದಿನಾಂಕ 12 ರಿಂದ 16 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫೆ. 12 ರಂದು ಸೋಮವಾರ ಬೆಳಿಗ್ಗೆ 7.30 ರಿಂದ ಗಂಗಾಪೂಜೆ, ಶ್ರೀ ಗಣಪತಿ ಪೂಜೆ, ಮಹಾಗಣಪತಿ ಹೋಮ ನೆರವೇರಲಿದೆ. ನಂತರ ಕ್ಷೀರಾಭಿಷೇಕ, ವಿಶೇಷ ಅಲಂಕಾರ, ತೀರ್ಥ ಪ್ರಸಾದ ವಿನಿಯೋಗ, ಅನ್ನ ಸಂತರ್ಪಣೆ ನೆರವೇರಲಿದೆ. ಸಂಜೆ 5 ಗಂಟೆಗೆ ಶ್ರೀ ನಾಗಲಿಂಗೇಶ್ವರ ದೇವರಿಗೆ ರುದ್ರಾಭಿಷೇಕ ಹಾಗೂ ಒಂದು ಲಕ್ಷ ಬಿಲ್ವಾರ್ಚನೆ ನೆರವೇರಲಿದೆ ಎಂದರು.

ಫೆ. 13 ರಂದು ಮಂಗಳವಾರ ಬೆಳಿಗ್ಗೆ 7.30 ರಿಂದ ದೇವಿಗೆ ಪಂಚಾಮೃತ ಅಭಿಷೇಕ, ಅಲಂಕಾರ, ವಿಶೇಷವಾಗಿ ಸಹಸ್ರ ನಾಮಾವಳಿ, ಪುಷ್ಪಾರ್ಚನೆ, ಕುಂಕುಮಾರ್ಚನೆ, ಮಂತ್ರ ಪುಷ್ಪ ಹಾಗೂ ಶ್ರೀ ದುರ್ಗಾ ಹೋಮ, ಅನ್ನ ಸಂತರ್ಪಣೆ ನೆರವೇರಲಿದೆ. ಸಂಜೆ 5 ಕ್ಕೆ ಶ್ರೀ ಲಲಿತ ಸಹಸ್ರ ನಾಮಾವಳಿಯೊಂದಿಗೆ ಕುಂಕುಮಾರ್ಚನೆ, ಭಜನಾ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಫೆ. 14 ರಂದು ಬುಧವಾರ ಬೆಳಿಗ್ಗೆ 8 ಗಂಟೆಯಿಂದ ಅಭಿಷೇಕ, ಕಳಸ ಸ್ಥಾಪನೆ, ನವಗ್ರಹ ಹೋಮ, ಪೂರ್ಣಾಹುತಿ, ಮಹಾ ಮಂಗಳಾರತಿ, ಮಂತ್ರಪುಷ್ಪ, ಅಷ್ಟಾವಧಾನ ಸೇವೆ, ತೀರ್ಥಪ್ರಸಾದ ವಿನಿಯೋಗವಿದೆ. ಸಂಜೆ 7 ಗಂಟೆಗೆ 'ಶಿವ ದಾಕ್ಷಾಯಿಣಿ ನೃತ್ಯ ವೈಭವ' ರೂಪಕವನ್ನು ತಪಸ್ಯ ವಾಸವಿ ಸಂಸ್ಥೆಯ ಮಕ್ಕಳು ಪ್ರದರ್ಶಿಸಲಿದ್ದಾರೆ ಎಂದರು.

ಫೆ. 15 ರಂದು ಗುರುವಾರ ಬೆಳಿಗ್ಗೆ 8 ಗಂಟೆಗೆ ಪಂಚಾಮೃತ ಅಭಿಷೇಕ, ಮಂಡಲ ಆರಾಧನೆ, ರುದ್ರಹೋಮ, ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಲಿವೆ. ಸಂಜೆ 5 ಕ್ಕೆ ಶ್ರೀ ಗಿರಿಜಾ ಶಂಕರ ಕಲ್ಯಾಣ ಹಮ್ಮಿಕೊಳ್ಳಲಾಗಿದ್ದು, ಬೆಂಗಳೂರಿನ ಪುರೋಹಿತರಾದ ಜಿ. ಪ್ರವೀಣ್ ಅವರಿಂದ ನಡೆಯಲಿದೆ. ಇದಲ್ಲದೇ ಪ್ರತಿ ಶನಿವಾರ ಸಂಜೆ 6.30 ಕ್ಕೆ ದೇವಸ್ಥಾನದಲ್ಲಿ ಹನುಮಾನ್ ಚಾಲಿಸ್ ಪಠಣ ನಡೆಯಲಿದೆ.

ಫೆ. 16 ರಂದು ಶುಕ್ರವಾರ ದೇವಿಗೆ ಬೆಳಿಗ್ಗೆ 8 ಕ್ಕೆ ಪಂಚದ್ರವ್ಯ ಪಂಚಾಮೃತಾಭಿಷೇಕ ಮಾಡಲಾಗುವುದು. ಮಧ್ಯಾಹ್ನ 12.05 ಕ್ಕೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ ಜರುಗಲಿದೆ.


ಸಂಜೆ 5 ಕ್ಕೆ ಶ್ರೀ ವಾಸವಿ ಯುವತಿಯರ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ವಿಶೇಷ ಆಹ್ವಾನಿತರಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಮೇಯರ್ ವಿನಾಯಕ ಪೈಲ್ವಾನ್, ಪಾಲಿಕೆ ಸದಸ್ಯೆ ಆಶಾ ಉಮೇಶ್ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪ್ರಕಾಶ್ ಪಾಟೀಲ್, ವೆಂಕಟಾಚಲಪತಿ ಶ್ರೇಷ್ಠಿ, ವೀರಭದ್ರರಾವ್, ನಾಗಭೂಷಣ್ ಕಡೇಕೊಪ್ಪ, ಪ್ರಭಾ ರವೀಂದ್ರ, ನಟರಾಜ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೆ.ಟಿ.ಜೆ. ನಗರ 1 ರಿಂದ 18ನೇ ಕ್ರಾಸ್, ಶಿವಪ್ಪ ಸರ್ಕಲ್, ಸಿದ್ದಮ್ಮ ಪಾರ್ಕ್ ಸುತ್ತಮುತ್ತಲಿನ ಪ್ರದೇಶ, ವಿದ್ಯಾರ್ಥಿ ಭವನ ವೃತ್ತ, ಡಾಂಗೆ ಪಾರ್ಕ್, ಭಗತ್ ಸಿಂಗ್ ನಗರ, ಲೇಬರ್ ಕಾಲೋನಿ, ಹದಡಿ ರೋಡ್, ಮುರುಘ ರಾಜೇಂದ್ರ ಮಠ, ಕೆ.ಬಿ. ಬಡಾವಣೆ, ತ್ರಿಶೂಲ್ ಕಲಾಭವನ, ತ್ರಿಶೂಲ್ ರಸ್ತೆ, ಆರೈಕೆ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 4ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವುಂಟಾಗಲಿದೆ.

## ಮುದ್ರಾ ಪ್ರಾಣಾಯಾಮ ತರಬೇತಿ



ದಾವಣಗೆರೆ, ಫೆ.11- ತಾಲ್ಲೂಕಿನ ಬೆಳವನೂರು ಗ್ರಾಮದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಎಸ್. ಎಸ್. ಜಿ. ಜಿ. ಸಂಸ್ಥೆಯಿಂದ ಯೋಗ ಮುದ್ರಾ ಪ್ರಾಣಾಯಾಮ ತರಬೇತಿ ಹಮ್ಮಿಕೊಳ್ಳಲಾಗಿತ್ತು. ಭಾರತ್ ಯೋಗ ಕುಮಾರ, ಮಂಜುನಾಥ್ ಮತ್ತು ತಂಡದವರು ತರಬೇತಿ ನೀಡಿದರು. ತರಬೇತಿಯಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.

**IN THE COURT OF THE PRINCIPAL DISTRICT AND SESSION JUDGE AND COMMERCIAL COURT AT DAVANGERE**

**Com. O.S.No. 70 of 2022**

Plaintiff : Canara Bank, Chamarajpet Branch -VS.-
Defendant: Sri Irfan Sharif Mulla
Defendant ;- Sri Irfan Sharif Mulla
Prop;- M/s Arfa Enterprises Aged about 30 years, Business, # 93/2, Hasbavi Circle, Chowkipet, Davanagere.

**Summons under Order 5 Rule 20(1)(a) of CPC.**

WHEREAS, the plaintiff Canara bank, Chamarajpet Branch, Davangere has instituted the suit against you for the recovery a sum of Rs 9,99,955/- and for court costs and such other reliefs. You the defendant hereby summoned to appear in this court in person or by a pleader duly instructed and able to answer all your material questions relating to the said suit who shall be accompanied by some person able to answer all such questions, on the 15/3/2024 at Davangere in the forenoon 11 O'Clock to answer the claim and as the day fixed for your appearance is appointed for the final disposal of the suit.

Take notice that in default of your appearance on the day before mentioned, the suit will be heard and determined in your absence.

Given under my hand and seal of the court this 3rd day of Feb. 2024.

**GOPAL.M.**
Advocate for Plaintiff
DAVANGERE
DATE : 3-2-2024

By the order of the Court,
**Chief Ministerial Officer**
Principal District and Session Judge Court, Davangere.

## ನಗರದ ದೇವತೆ ದುರ್ಗಾಂಬಿಕಾ ದೇವಿ ಜಾತ್ರೆಯ ಹಂದರ ಕಂಬ ಪೂಜೆ ನಾಳೆ



ದಾವಣಗೆರೆ, ಫೆ. 11 - ನಗರದ ಶ್ರೀ ದುರ್ಗಾಂಬಿಕಾ ದೇವಿಯ ಜಾತ್ರೆ ಪ್ರಯುಕ್ತ ಹಂದರ ಕಂಬ ಪೂಜಾ ಕಾರ್ಯಕ್ರಮವು ನಾಡಿದ್ದು ದಿನಾಂಕ 13ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ನೆರವೇರಲಿದೆ. ದೇವಸ್ಥಾನ ಪುರೋಹಿತ ನಾಗರಾಜ್ ಜೋಯಿಸ್ ಪೂಜೆಯನ್ನು ನಡೆಸಿಕೊಡಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಉಪಸ್ಥಿತರಿರುವರು.

## ನಗರಕ್ಕೆ ಇಂದು ನ್ಯಾ. ಸಂತೋಷ್ ಹೆಗ್ಡೆ



ಆರ್.ಎಲ್. ಕಾನೂನು ಕಾಲೇಜು ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘ, ಆರ್.ಎಲ್. ಕಾನೂನು ಕಾಲೇಜು, ದಾವಣಗೆರೆ ಇವರ ವತಿಯಿಂದ ವೃತ್ತಿಪರ ಪುಷ್ಠೀಕರಣ ಕಾರ್ಯಕ್ರಮದ ಅಂಗವಾಗಿ 'ಸಾಮಾಜಿಕ ಮೌಲ್ಯಗಳ ಕುಸಿತ ಮತ್ತು ಪರಿಣಾಮಗಳು' ವಿಷಯ ಕುರಿತು ಉಪನ್ಯಾಸವನ್ನು ಆರ್.ಎಲ್. ಕಾನೂನು ಕಾಲೇಜಿನಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸರ್ವೋಚ್ಛ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ನೆರವೇರಿಸಿ ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ, ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಆಗಮಿಸುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್ ವಹಿಸುವರು ಎಂದು ಐಕ್ಯು. ಎಸಿ ಸಂಚಾಲಕರು ಹಾಗೂ ಸಹಾಯಕ ಪ್ರಾಧ್ಯಾಪಕ ಬಸವನಗೌಡ ಬಿ.ಪಿ. ಮತ್ತು ಕಾರ್ಯಕ್ರಮದ ಸಂಯೋಜಕರು ಮತ್ತು ಸಹಾಯಕ ಪ್ರಾಧ್ಯಾಪಕರಾದ ಕು. ಅರ್ಚನಾ ಬಿ. ತಿಳಿಸಿದರು.

ಶ್ರೀ ವಿಘ್ನೇಶ್ವರ
ಹೋಮ್ ನರ್ಸಿಂಗ್ ಸರ್ವೀಸ್
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ / ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC ಉಚಿತ ಊಟ ವಸತಿಯೊಂದಿಗೆ 15000 ರಿಂದ 25000 ರೂ. ದಾವಣಗೆರೆ. ಸಂಪರ್ಕಿಸಿ :
ಮೊಬೈಲ್ ನಂ: 73489 91748
70223 96642, 63665 97195

**ಸಾರ್ವಜನಿಕ ಪ್ರಕಟಣೆ**

ಈ ಕೆಳಕಂಡ ಪ್ರಕಟಣೆದಾರರು ಈ ಮುಖೇನ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ

ನಾನು ದಿ. 02.02.2024 ರಂದು ದಾವಣಗೆರೆಯ ಪಿ.ಜೆ. ಬಡಾವಣೆಯಿಂದ ರೈಲ್ವೆ ನಿಲ್ದಾಣದ ಬಳಿ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿರುವಾಗ ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂಬರ್ 22472 dt : 09.03.2020 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ 8734 dt: 08.09.2021 ಹಾಗೂ ನನ್ನ ಜಮೀನಿನ ಇತರೆ ರೆವೆನ್ಯೂ ದಾಖಲೆಗಳು ಇರುವ ಕವರ್ ಜೆರಾಕ್ಸ್ ಮಾಡಿಸಲು ಹೈಸ್ಕೂಲ್ ಮೈದಾನದ ಹತ್ತಿರ ನ್ಯಾಯಾಲಯದ ಪಕ್ಕ ಇರುವ ಜೆರಾಕ್ಸ್ ಅಂಗಡಿಗೆ ಹೋಗಿ ಜೆರಾಕ್ಸ್ ಮಾಡಿಸಿಕೊಂಡು ವಾಪಾಸ್ ಬರುವಾಗ ರೈಲ್ವೆ ನಿಲ್ದಾಣದ ಬಳಿ ಕೈ ಜಾರಿ ಕೆಳಗೆ ಬಿದ್ದಿತು.

ಸ್ವಲ್ಪ ಮುಂದೆ ಹೋದಾಗ ಆ ಕವರ್ ಬಿದ್ದಿರುವುದು ಗೊತ್ತಾಗಿ ನಾನು ಬಂದ ಮಾರ್ಗದಲ್ಲಿಯೇ ಕೂಡಲೇ ಹಿಂದಿರುಗುವಷ್ಟರಲ್ಲಿ ಸದರಿ ಕವರ್ ಸಿಕ್ಕಿತು, ಆದರೆ ಆ ಕವರ್‌ನಲ್ಲಿದ್ದ ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂಬರ್ 22472 dt. : 09.03.2020 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ 8734 dt. : 08.09.2021 ಕಳೆದಿರುತ್ತದೆ. ಆದರೆ ಅದರೊಂದಿಗೆ ಇತರೆ ರೆವೆನ್ಯೂ ದಾಖಲೆಗಳು ಹಾಗೆಯೇ ಇದ್ದವು. ಆದ ಕಾರಣ ಸದರಿ ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂಬರ್ 22472 dt. :09.03.2020 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ 8734 dt. : 08.09.2021 ದಾಖಲೆ ಯಾರಿಗಾದರೂ ದೊರೆತಲ್ಲಿ ಕೂಡಲೇ ಈ ಕೆಳಕಂಡ ಪ್ರಕಟಣೆದಾರರ ವಿಳಾಸಕ್ಕೆ ಸಂಪರ್ಕಿಸಬೇಕೆಂದು, ಸದರಿ ಪ್ರಕಟಣೆದಾರರು ತಮ್ಮ ಮೇಲೆ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿಲ್ಲ ಹಾಗೂ ತಮ್ಮ ಮೇಲೆ ಪ್ರಕಟಣೆದಾರರು ಯಾವುದೇ ರೀತಿಯ ಕಾನೂನಿನ ಕ್ರಮ ಕೈಗೊಳ್ಳುವುದಿಲ್ಲವೆಂದು ತಿಳಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಕಚೇರಿ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಓಬಜ್ಜಿಹಳ್ಳಿ ಗ್ರಾಮದ ರೀ ಸರ್ವೆ ನಂ. 23/1, ಇದರ ವಿಸ್ತೀರ್ಣ ಎಕರೆ-3, ಗುಂಟೆ-30ವುಳ್ಳ ಜಮೀನಿಗೆ ಚಕ್ಕುಬಂದಿ.

**ಪೂರ್ವಕ್ಕೆ** : ರವಿ ಇವರ ಜಮೀನು, **ಪಶ್ಚಿಮಕ್ಕೆ** : ವಾಲ್ಕಿ ಬಾಯಿ ಇವರ ಜಮೀನು,
**ಉತ್ತರಕ್ಕೆ** : ನಾಗರಾಜ್ ಬೆಳ್ಳೂಡಿ ಇವರ ಜಮೀನು,
**ದಕ್ಷಿಣಕ್ಕೆ** : ನಾಗರಾಜ್ ಬೆಳ್ಳೂಡಿ ಇವರ ಜಮೀನು.

ಈ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳು ವಿವರ ಈ ಕೆಳ ಕಂಡಂತೆ ಇದೆ.

**ವಿ.ಸೂ.** : ಸದರಿ ಮೇಲ್ಕಾಣಿಸಿದ ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂಬರ್ 22472 dt. : 9.03.2020 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ 8734 dt : 8.9.2021 ದಾಖಲೆಗಳು ಯಾರಾದರೂ ನೀಡಿದಲ್ಲಿ ಅವರಿಗೆ ಸೂಕ್ತ ಬಹುಮಾನ ನೀಡಲಾಗುತ್ತದೆ.

ಪ್ರಕಟಣೆದಾರ
**ಆರ್.ಎಸ್ ಮಂಜುನಾಥ ಬಿನ್ ಆರ್. ಶಿವಪ್ಪ,**
ಶ್ರೀ ದುರ್ಗಾಂಬಿಕಾ ದೇವಸ್ಥಾನದ ಹತ್ತಿರ, ದೊಡ್ಡಬೂದಿಹಾಳು ಗ್ರಾಮ,
ದಾವಣಗೆರೆ ತಾಲ್ಲೂಕು, **ಮೊ : 73377 77272**

## ಸೂರಗೊಂಡನಕೊಪ್ಪದಲ್ಲಿ ನಾಳೆ ಸಂತ ಸೇವಾಲಾಲ್ ಜಯಂತಿ



ದಾವಣಗೆರೆ, ಫೆ. 11- ಬಂಜಾರ ಸಮುದಾಯದ ದಾರ್ಶನಿಕ ಜಗದ್ಗುರು ಸಂತ ಸೇವಾಲಾಲ್ ಅವರ 285 ನೇ ಜಯಂತ್ಯುತ್ಸವ ಸಮಾರಂಭವು ನಾಡಿದ್ದು ದಿನಾಂಕ 13 ರಿಂದ 15 ರವರೆಗೆ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ನಡೆಯಲಿದೆ ಎಂದು ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿಯ ಪ್ರಮುಖರಾದ ಕೆ. ರಾಘವೇಂದ್ರನಾಯ್ಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಾಡಿದ್ದು 13 ರಂದು ಕಾಟಿ ಆರೋಹಣ, ತಾಂಡಾ ಸಾಂಪ್ರದಾಯಿಕ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಸತ್ಸಂಗ, ವಾಜಾ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ದಿನಾಂಕ 14 ರಂದು ಪೂರ್ಣಕುಂಭ ಮೆರವಣಿಗೆ, ಮಾತಾ ಮರಿಯಮ್ಮ ದೇವಿಗೆ ಅಭಿಷೇಕ, ಅಲಂಕಾರ, ಸಂತ ಸೇವಾಲಾಲ್ ಮೂರ್ತಿಗೆ ಅಭಿಷೇಕ, ಅಲಂಕಾರ ಮತ್ತು ಉಭಯ ದೇವಳಗಳಲ್ಲಿ ವಾಜಾ ಭಜನ್, ಸಮುದಾಯದ ಪ್ರಾರ್ಥನೆ, ಆಗಮಿತ ಮಾಲಾಧಾರಿಗಳಿಗೆ ದರ್ಶನ ಮತ್ತು ಸೇವಾ ಸಂದೇಶ, ಮಹಾ ಮಂಗಳಾರತಿ, ಉತ್ಸವ ಮೂರ್ತಿಯ ಪ್ರತಿಷ್ಠಾಪನೆ ಯೊಂದಿಗೆ ಪಲ್ಲಕ್ಕಿ ಉತ್ಸವ, ನಿರಂತರವಾಗಿ ಮಾಲಾಧಾರಿಗಳಿಂದ ಮಾಲೆ ಇರುಮುಡಿಗಳ ಸಮರ್ಪಣಾ ಕಾರ್ಯಕ್ರಮ ಜರುಗಲಿದೆ.

ಅಂದು (ಫೆ.14 ) ಮಧ್ಯಾಹ್ನ 2.30 ಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಸೇವಾಲಾಲ್ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಮುಖ್ಯ ಅತಿಥಿಗಳಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಹೆಚ್.ಡಿ. ಕುಮಾರಸ್ವಾಮಿ, ಸಚಿವರಾದ ಹೆಚ್.ಕೆ. ಪಾಟೀಲ್, ಡಾ. ಹೆಚ್.ಸಿ. ಮಹಾದೇವಪ್ಪ, ಸತೀಶ್ ಜಾರಕಿಹೊಳಿ, ಎಸ್. ಎಸ್. ಮಲ್ಲಿಕಾರ್ಜುನ್, ಮಧು ಬಂಗಾರಪ್ಪ, ಮಹಾರಾಷ್ಟ್ರ ಸರ್ಕಾರದ ಸಚಿವ ಸಂಜಯ್ ಡಿ. ರಾಥೋಡ್, ಸಂಸದರಾದ ಡಾ.ಜಿ.ಎಂ. ಸಿದ್ದೇಶ್ವರ್, ಬಿ.ವೈ. ರಾಘವೇಂದ್ರ, ಡಾ. ಉಮೇಶ್ ಜಿ. ಜಾಧವ್ ಮತ್ತಿತರರು ಭಾಗವಹಿಸಲಿದ್ದಾರೆ. ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಸುಮಾರು ಐದು ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಜಿಲ್ಲಾಡಳಿತದೊಂದಿಗೆ ಹಲವಾರು ಸಭೆ ನಡೆಸಿ, ಯಾವುದೇ ರೀತಿ ತೊಂದರೆಯಾಗದಂತೆ ಊಟ, ವಸತಿ, ಸಾರಿಗೆ ಸೇರಿದಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಎನ್. ಜಯದೇವನಾಯ್ಕ, ಜಿ. ಮಂಜಾನಾಯ್ಕ, ಚಂದ್ರಾನಾಯ್ಕ, ನಂಜಾನಾಯ್ಕ, ಹನುಮಂತನಾಯ್ಕ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಗಡಿಚೌಡೇಶ್ವರಿ ವಾರ್ಷಿಕೋತ್ಸವ

ಕುಂದುವಾಡ ರಸ್ತೆಯ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರೀ ಬನ್ನಿಮಹಾಂಕಾಳಿ, ಶ್ರೀ ವಿನಾಯಕ, ಶ್ರೀ ಈಶ್ವರ, ಶ್ರೀ ಬಸವೇಶ್ವರ ಹಾಗೂ ಶ್ರೀ ಗಡಿಚೌಡೇಶ್ವರಿ ದೇವಿಯ 19 ನೇ ವಾರ್ಷಿಕೋತ್ಸವ ಹಾಗೂ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ 15 ನೇ ವಾರ್ಷಿಕೋತ್ಸವ ಕಾರ್ಯಕ್ರಮಗಳು ಇಂದು ಜರುಗಲಿವೆ. ಬೆಳಿಗ್ಗೆ 5.30 ಕ್ಕೆ ಕಾಕಡಾರತಿ ನಂತರ 8.30 ಕ್ಕೆ ಪ್ರಸಾದ ವಿನಿಯೋಗವಿದೆ.

## ನೇರ ತೆರಿಗೆ ಸಂಗ್ರಹದಲ್ಲಿ ಶೇ.20ರ ಹೆಚ್ಚಳ

ನವದೆಹಲಿ, ಫೆ. 11 - ಪ್ರಸಕ್ತ ಹಣಕಾಸು ವರ್ಷದಲ್ಲಿ ಇದುವರೆಗೆ 15.60 ಲಕ್ಷ ಕೋಟಿ ರೂ.ಗಳ ನೇರ ತೆರಿಗೆ ಸಂಗ್ರಹಿಸಲಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.20ರಷ್ಟು ಹೆಚ್ಚಾಗಿದೆ.

ನೇರ ತೆರಿಗೆ ಸಂಗ್ರಹದಲ್ಲಿ ನಿರಂತರ ಹೆಚ್ಚಳವಾಗುತ್ತಿದೆ. 2023-24ರ ಸಾಲಿನ ಗುರಿಯ ಶೇ.80.23ರಷ್ಟು ಈಗಾಗಲೇ ಸಂಗ್ರಹವಾಗಿದೆ ಎಂದು ಸಿ.ಬಿ.ಡಿ.ಟಿ. ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಕೆಳ ನ್ಯಾಯಾಲಯ ಎಂದು ಬಳಸದಂತೆ 'ಸುಪ್ರೀಂ' ಸೂಚನೆ

ನವದೆಹಲಿ, ಫೆ. 11 - ವಿಚಾರಣಾ ನ್ಯಾಯಾಲಯಗಳನ್ನು 'ಕೆಳ ನ್ಯಾಯಾಲಯ' ಎಂದು ಉಲ್ಲೇಖಿಸಬಾರದು ಎಂದು ರಿಜಿಸ್ಟ್ರಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ವಿಚಾರಣಾ ನ್ಯಾಯಾಲಯದ ದಾಖಲೆಗಳನ್ನೂ ಸಹ 'ಕೆಳ ನ್ಯಾಯಾಲಯದ ದಾಖಲೆಗಳು' ಎಂದು ಉಲ್ಲೇಖಿಸ ಬಾರದು ಎಂದು ತಿಳಿಸಲಾಗಿದೆ. ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಸೂಚನೆ ನೀಡಿದೆ.


### ಹೃತ್ಪೂರ್ವಕ ಕೃತಜ್ಞತೆಗಳು



ದಿನಾಂಕ : 11.02.2024ರ ಭಾನುವಾರ ನಡೆದ ದಿ ದಾವಣಗೆರೆಅರ್ಬನ್‌ಕೋ ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿದ್ದ ನನಗೆ ಮತ ನೀಡಿದ ಎಲ್ಲಾ ಸದಸ್ಯರುಗಳಿಗೂ, ಚುನಾವಣಾ ಪ್ರಚಾರ ಸಮಯದಲ್ಲಿ ನನ್ನ ಜೊತೆ ಹಗಲಿರುಳು ಶ್ರಮಿಸಿದ ಎಲ್ಲಾ ಸ್ನೇಹಿತರಿಗೂ, ಹಿತೈಷಿಗಳಿಗೂ, ಅಭಿಮಾನಿಗಳಿಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

**ಪ್ರಭುಸ್ವಾಮಿ ಎಸ್.ವಿ. (ಪ್ರಭು ವಾಣಿ)**



### ಹೃತ್ಪೂರ್ವಕ ಕೃತಜ್ಞತೆಗಳು



ದಿ. ಜಂಬಗಿ ಶರಣಪ್ಪನವರು

ಮಾನ್ಯ ಮತದಾರ ಬಾಂಧವರೇ,

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 11.2.2024ರಂದು ನಡೆದ ಚುನಾವಣೆಯಲ್ಲಿ ಪ್ರವರ್ಗ 'ಬಿ' ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ನನಗೆ ಮತದಾನ ಮಾಡಿದ ಬ್ಯಾಂಕಿನ ಎಲ್ಲಾ ಮತದಾರ ಬಾಂಧವರಿಗೂ ಹೃದಯಪೂರ್ವಕ ಕೃತಜ್ಞತೆಗಳು. ಚುನಾವಣೆ ಸಂದರ್ಭದಲ್ಲಿ ನನ್ನೊಂದಿಗೆ ಹಗಲಿರುಳು ಶ್ರಮಿಸಿದ ನಮ್ಮ ಆತ್ಮೀಯರಿಗೂ,



ಗುರು-ಹಿರಿಯರಿಗೂ, ಹಿತೈಷಿಗಳಿಗೂ, ಬಂಧುಗಳಿಗೂ, ಸ್ನೇಹಿತರಿಗೂ, ವ್ಯಾಪಾರಸ್ಥರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**ಜಂಬಗಿ ರಾದೇಶ**

ಜಿಎಸ್‌ಟಿ ಮತ್ತು ಆದಾಯ ತೆರಿಗೆ ಸಲಹೆಗಾರರು

ಮೊ : 94482 16089




### ಹೃದಯಪೂರ್ವಕ ಕೃತಜ್ಞತೆಗಳು

ಮಾನ್ಯ ಮತದಾರ ಬಾಂಧವರೇ,

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ 11.2.2024 ರಂದು ನಡೆದಿದ್ದು, ಈ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ನನಗೆ ಮತದಾನ ಮಾಡಿದ ಬ್ಯಾಂಕಿನ ಎಲ್ಲಾ ಮತದಾರ ಬಾಂಧವರಿಗೆ ಹೃದಯಪೂರ್ವಕ ಕೃತಜ್ಞತೆಗಳು. ಚುನಾವಣೆ ಸಂದರ್ಭದಲ್ಲಿ ನನ್ನೊಂದಿಗೆ ಹಗಲಿರುಳು ಶ್ರಮಿಸಿದ ಗುರು-ಹಿರಿಯರಿಗೂ, ಸ್ನೇಹಿತರಿಗೂ, ಬಂಧುಗಳಿಗೂ, ವ್ಯಾಪಾರಸ್ಥರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ನಿಮ್ಮ ಪ್ರೀತಿಯ ವಿಶ್ವಾಸಕ್ಕೆ ಸದಾ ಚಿರಋಣಿ.



**ಜಯಪ್ರಕಾಶ್ ಎಂ.ವಿ. (ಜಯಪ್ರಕಾಶ್ ಮಾಗಿ)**

ಮಾಲೀಕರು, ಹರ್ಷ ಕಮರ್ಷಿಯಲ್ಸ್, ಜೆ.ಪಿ. ಎಂಟರ್ ಪ್ರೈಸಸ್, ರೈಸ್ ಕಾರ್ನರ್
ನಿರ್ದೇಶಕರು, ದಾವಣಗೆರೆ ಜಿಲ್ಲಾ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಅಧ್ಯಕ್ಷರು,
ಚೌಕಿಪೇಟೆ ಅಕ್ಕಿ ವರ್ತಕರ ಸಂಘ, ದಾವಣಗೆರೆ. ಹಿಂದೂ ಮಹಾಗಣಪತಿ ಟ್ರಸ್ಟ್, ದಾವಣಗೆರೆ.
ಉಪಾಧ್ಯಕ್ಷರು, ಬನ್ನಿ ಮಹಾಕಾಳಿ ಸೇವಾ ಸಮಿತಿ, ದೇವರಾಜ ಅರಸು ಬಡಾವಣೆ
ಹಾಗೂ ಶಬರಿಗಿರೀಶ ಸೇವಾ ಸಮಿತಿ (ರಿ.) ಶಿವಾಲಿ ರಸ್ತೆ. ಮೊ - 94498 07696, 72594 07696
ಅಭ್ಯರ್ಥಿ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.



### ಎರಡನೇ ವರ್ಷದ ಪುಣ್ಯಸ್ಮರಣೆ



**ಶ್ರೀ ಹೆಚ್. ಕೆ. ರಂಗಪ್ಪನವರು**

ನಿವೃತ್ತ ಮುಖ್ಯೋಪಾಧ್ಯಾಯರು

ಜನನ : 05-05-1956 ಮರಣ : 12-02-2022

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

**ಶ್ರೀಮತಿ ಸುನಂದಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಹೆಬ್ಬಾಳು-ದಾವಣಗೆರೆ.**

ಮೊ. : 96771 27711, 96638 23066



### ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಶ್ರೀ ಎಲ್.ಎ. ಅದ್ವಾನಿ**

ನಿವೃತ್ತ ಉಪ ಆಯುಕ್ತರು (ಅಬಕಾರಿ)

ಮರಣ : 12-02-2022

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : **ಶ್ರೀಮತಿ ಷಂಷಾದ್ ಬೇಗಂ ಮತ್ತು ಪುತ್ರ, ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

ಮೊ. : 98441 27893



SPARSH HOSPITAL
THE TOUCH OF LIFE




### ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್

ಹೃದಯ ವೈಫಲ್ಯ ಕ್ಲಿನಿಕ್
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು
ಸಮಾಲೋಚನೆಗಾಗಿ ದಾವಣಗೆರೆಗೆ ಭೇಟಿ ನೀಡಲಿದ್ದಾರೆ

**ಡಾ|| ಪಿ ಅಶೋಕ್ ಕುಮಾರ್**

MBBS, MD, DM, FSCAI Interventional Cardiology,
Advanced Heart Failure Management & Transplant Cardiology

**Consultant Cardiologist**

ಈ ಕೆಳಕಂಡ ತೊಂದರೆಗಳಿಗೆ ಸಲಹೆ ನೀಡಲಾಗುವುದು

ಹೃದಯ ಲಯದ ತೊಂದರೆಗಳು (Arrhythmias) । ನೀವು ಜನಿಸುವಾಗ ಕಂಡು ಬಂದ ಹೃದಯ ದೋಷಗಳು (Congenital Heart Defects) ಹೃದಯ ಕವಾಟದ ಕಾಯಿಲೆ । ಹೃದಯ ಸ್ನಾಯುವಿನ ಕಾಯಿಲೆ । ಹೃದಯದ ಸೋಂಕು । ಎದೆ ನೋವು, ಎದೆಯ ಬಿಗಿತ, ಎದೆಯ ಒತ್ತಡ ಮತ್ತು ಎದೆಯ ಅಸ್ವಸ್ಥತೆ (Angina) । ಆಯಾಸ । ಒತ್ತಡ । ಪಾದದ ಊತ । ಉಸಿರಾಟ ತೊಂದರೆ

ನೋಂದಣಿಗಾಗಿ ಕರೆಮಾಡಿ: **97316 41986 | 99800 33277**

ಸೂಚನೆ: ವೈದ್ಯರು ಪ್ರತೀ ತಿಂಗಳ ಎರಡನೇ ಬುಧವಾರ ತಪಾಸಣೆಗೆ ಲಭ್ಯರಿರುತ್ತಾರೆ

ದಿನಾಂಕ: ಬುಧವಾರ, 14ನೇ ಫೆಬ್ರವರಿ 2024 | ಸಮಯ: ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 1:00 ರವರೆಗೆ

ಸ್ಥಳ: **ಸಿಟಿ ಸೆಂಟ್ರಲ್ ಆಸ್ಪತ್ರೆ**

ಅಕ್ಕಮಹಾದೇವಿ ರಸ್ತೆ, 17, AVK ಕಾಲೇಜು ರಸ್ತೆ, ಪಿ ಜೆ ಎಕ್ಸಟೆನ್ಶನ್, ದಾವಣಗೆರೆ – 577 002





# ಹೃತ್ಪೂರ್ವಕ ಕೃತಜ್ಞತೆಗಳು

ಎಲೆಬೇತೂರು ಗ್ರಾಮ ಪಂಚಾಯತಿಗೆ ನಡೆದ ಚುನಾವಣೆಯಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ (ಸಾಮಾನ್ಯ) ಮತ್ತು ಉಪಾಧ್ಯಕ್ಷ (ಸಾಮಾನ್ಯ ಮಹಿಳೆ) ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ **ಶ್ರೀ ಕೆ.ಎಂ. ರೇವಣಸಿದ್ದಪ್ಪ** ಹಾಗೂ ನೂತನ ಉಪಾಧ್ಯಕ್ಷರಾಗಿ **ಶ್ರೀಮತಿ ಶಾಂತಮ್ಮ ಕೋಂ ಮಂಜಪ್ಪ** ಆದ ನಮ್ಮನ್ನು ಆಯ್ಕೆ ಮಾಡಿದ ಗ್ರಾಮ ಪಂಚಾಯತಿಯ ಎಲ್ಲಾ ಸದಸ್ಯರುಗಳಿಗೂ, ಆಯ್ಕೆಯಾಗಲು ಸಹಕರಿಸಿದ ಎಲೆಬೇತೂರು, ಬಿ. ಕಲಪನಹಳ್ಳಿ, ಬಿ. ಚಿತ್ತಾನಹಳ್ಳಿ ಗ್ರಾಮಗಳ ಗ್ರಾಮಸ್ಥರಿಗೂ ಹಾಗೂ ಎಲ್ಲಾ ಬಿಜೆಪಿ ಮುಖಂಡರುಗಳಿಗೂ, ಕಾರ್ಯಕರ್ತರುಗಳಿಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆಯ್ಕೆ ಮಾಡಲು ಸಹಕರಿಸಿದವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.



**ಕೆ.ಎಂ. ರೇವಣಸಿದ್ದಪ್ಪ ಬಿನ್ ಪತ್ರಿಬಸಪ್ಪ**
ಬಿ. ಕಲಪನಹಳ್ಳಿ ಅಧ್ಯಕ್ಷರು, ಗ್ರಾಮ ಪಂಚಾಯತಿ ಎಲೆಬೇತೂರು.

**ಶ್ರೀಮತಿ ಕೆ.ಸಿ. ಸುಮ ಕೋಂ ಬಿ.ವಿ. ವಿರೂಪಾಕ್ಷಪ್ಪ**
ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರು ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ಶ್ರೀಮತಿ ಸೌಭಾಗ್ಯಮ್ಮ ಕೋಂ ಬಿ.ಜಿ. ಸಂಗಪ್ಪಗೌಡ್ರು**
ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ಶ್ರೀಮತಿ ಲತಾ ಕೋಂ ಮರುಳಸಿದ್ದಚಾರಿ**
ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ಶ್ರೀಮತಿ ಅಂಜಮ್ಮ ಕೋಂ ಹನುಮಂತಪ್ಪ**
ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ಶ್ರೀಮತಿ ಶಾಂತಮ್ಮ ಕೋಂ ಮಂಜಪ್ಪ**
ಉಪಾಧ್ಯಕ್ಷರು, ಗ್ರಾಮ ಪಂಚಾಯತಿ ಎಲೆಬೇತೂರು



**ಶ್ರೀಮತಿ ಟಿ. ರೇಣುಕಮ್ಮ ಕೋಂ ತಿಮ್ಮಣ್ಣ ಬಿ. ಚಿತ್ತಾನಹಳ್ಳಿ**
ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ಶ್ರೀಮತಿ ಚೌಡಮ್ಮ ಕೋಂ ರವಿ ಬಿ. ಚಿತ್ತಾನಹಳ್ಳಿ**
ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ಜಿ.ಎನ್. ಹುಚ್ಚಪ್ಪ ಬಿನ್ ನಾಗಪ್ಪ ಬಿ.ಚಿತ್ತಾನಹಳ್ಳಿ**
ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ಎ.ಕೆ. ಪರಮೇಶ್ವರಪ್ಪ ಬಿನ್ ರಾಮಪ್ಪ ಬಿ.ಕಲಪನಹಳ್ಳಿ**
ಗ್ರಾಮ ಪಂಚಾಯತಿ ಸದಸ್ಯರು ಎಲೆಬೇತೂರು

**ನೂತನ ಶ್ರೀ ಮಾರಿಕಾಂಬಾ ದೇವಸ್ಥಾನ ಉದ್ಘಾಟನೆ ಹಾಗೂ ಕಳಸಾರೋಹಣ ಕಾರ್ಯಕ್ರಮಕ್ಕೆ ಶುಭಾಶಯಗಳು**